ಅಪರಂಜಿ

ಆಗಸ್ಟ್ 2001
ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವಕುಮಾರ್

ನಾಗೂಶ್ರೀ ಸೂರಿ

ಬೂಸ

ಶಿವು

ಸತ್ಯವತಿ

ಹೆಚ್. ಗೋಪಾಲಕೃಷ್ಣ

ವಿಕ್ರಮ ಕವಲಿ

ಕೃಷ್ಣ ಸುಬ್ಬರಾವ್

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail.com
website: aparanjimag.com

ವಿಳಾಸ: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 18 ಆಗಸ್ಟ್ - 2001 ಸಂಚಿಕೆ - 11

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



೦ ಪ್ರಕಾಶ್

ಕಾನೂನು ಕಾಲೇಜು ಮಾನ್ಯತೆ ವಿವಾದ

- ಸುದ್ದಿ

ಇದನ್ನ ಕೋರ್ಟಿನಲ್ಲಿ ನಿರ್ಧರಿಸಲೇಬೇಕು!!

★★★

ಸಕ್ಕರೆ ಕಾರ್ಖಾನೆಗಳಲ್ಲಿ ವಿದ್ಯುತ್ ಉತ್ಪಾದನೆ ಯೋಜನೆ

- ಪತ್ರಿಕೆ

ಬಿಲ್ಲುಗಳು ಕಹಿಯಾಗಿರುವುದಿಲ್ಲ ಸಧ್ಯ!!

★★★

ಅಂತೂ ಜಯಲಲಿತ ಫ್ಲೈ ಓವರ್‌ನಿಂದ ಕೆಳಕ್ಕೆ ಇಳಿಯಬೇಕಾಯಿತು!!

★★★

ನಡುರಾತ್ರಿಯಲ್ಲೂ ಕಪ್ಪು ಕನ್ನಡಕ ಏಕೆ ಎಂದು ಅಪರಂಜಿ ಬೆರಗಾದಳಂತೆ!!

★★★

ಮುಷರಫ್ ರಾಜಘಾಟ್ ಭೇಟಿ ಸಿದ್ಧತೆ

- ಸುದ್ದಿ

ಯಾಕೋ ಗೋಕುಲಾಷ್ಟಮಿ ನೆನಪಿಗೆ ಬರುತ್ತೆ!!

★★★

ಮುಷರಫ್ ಅವರನ್ನು ನಂಬುವುದೇ ಮಹಾ ಪ್ರಮಾದ

- ಬೇನಜೀರ್

ಅರಣ್ಯ ರೋದನ ಅಂದರೆ ಇದೇ!!

★★★

ಹೃದಯ ಕಾಯಿಲೆ ತಡೆಗಟ್ಟುವ ಅರಿವು ಮೂಡಿಸಲು ಕ್ರಮ

- ಬೆಂಗಳೂರಿನ ಸುದ್ದಿ

ಹೃದಯವಂತಿಕೆ ಅಂದರೆ ಇದೇ!!

★★★

ಕಳಚಿದ ಕೊಂಡಿ - ಬೋಗಿಗಳ ಬಿಟ್ಟು ಹೊರಟ ಎಂಜಿನ್

- ಸುದ್ದಿ

ಕೇಂದ್ರ ಸರ್ಕಾರದ ಬಗ್ಗೆ ಟೀಕೆಯೇ??!

★★★

ಯೂನಿಟ್ ಟ್ರಸ್ಟ್ ಆಫ್ ಇಂಡಿಯಾದ ಹೆಸರನ್ನು ಬದಲಾಯಿಸುತ್ತಾರೆ ಎಂಬುದು ಶುದ್ಧ ಕುಹಕ!

★★★



ಇವತ್ತು ನಮ್ಮ
ಬೀಗರ ಜೊತೆ ಶಿಖರ
ಸಮ್ಮೇಳನ ಇದೇರಿ,
ತೊಂದ್ರೆ ಕೊಡ್ಬೇಡಿ ಹೋಗಿ.

ನಮ್ಮ ನಮ್ಮಲ್ಲಿ

ಅದೊಂದು ಅಂತರರಾಷ್ಟ್ರೀಯ ಸೆಮಿನಾರ್. ಭವ್ಯವಾದ ಹವಾನಿಯಂತ್ರಿತ ಸಭಾಂಗಣ. ಭಾಗವಹಿಸಿದ್ದ ಸಭಿಕರಲ್ಲಿ ಹಲವರು ಶುಭ್ರವಾದ ಕಚ್ಚೆಪಂಚೆ ಜುಬ್ಬಾ ಧರಿಸಿ ಬಂದಿದ್ದರೆ ಮಿಕ್ಕವರು ಅಪ್ಪಟ ರೀಸರ್ಚ್ ಸ್ಕಾಲರುಗಳಂತೆ ಮಾಸಲು ಪ್ಯಾಂಟು ಷರಟು, ಹೆಗಲ ಮೇಲೊಂದು ತೂಗುಚೀಲ ಇವುಗಳಿಂದ ಅಲಂಕೃತರಾಗಿದ್ದರು. ಸಭಿಕರ ಉಡುಪುಗಳ ಈ ಮಿಶ್ರಣ ಅಂದಿನ ಸೆಮಿನಾರಿನ ವಿಷಯಕ್ಕೆ ಚೆನ್ನಾಗಿ ಒಪ್ಪುತ್ತಿತ್ತು. ಅಂದಿನ ವಿಷಯ ''ವಿಜ್ಞಾನ ಮತ್ತು ಅಧ್ಯಾತ್ಮ''. ''ಕಾನ್ಷಸ್ನೆಸ್ ಮತ್ತು ಜೆನೆಟಿಕ್ಸ್ ಕುರಿತು ಚರ್ಚೆ'' ಅಂತ ವಿಷಯಕ್ಕೆ ವಿವರಣೆ ಬೇರೆ. ನನ್ನ ತಮ್ಮ ಪ್ರಕಾಶನೊಂದಿಗೆ ನಾನು ಅಲ್ಲಿಗೆ ಹೋಗಿ ಕುಳಿತಾಗ ವಿದ್ಯಾನಂದ್ ನಂಜುಂಡಯ್ಯ ಎಂಬ ವಿದ್ವಾಂಸರೊಬ್ಬರು ಸೋಷಿಯೋ ಬಯಾಲಜಿ ಕುರಿತು ಮಾತನಾಡುತ್ತಿದ್ದರು. ಸೋಷಿಯೋ ಬಯಾಲಜಿ ಅಂದಾಗ ಹಿಂದೆ ಕೊರವಂಜಿಯಲ್ಲಿ ಅರಾಸೇ ಬರೆದ ಕವನವೊಂದು ನೆನಪಿಗೆ ಬರುತ್ತದೆ. ಕ್ರಿಕ್ ಮತ್ತು ವಾಟ್ಸನ್, ಕೇಂಬ್ರಿಡ್ಜಿನಲ್ಲಿ ಡಿ.ಎನ್.ಎ. ಕಣಗಳ ರಚನೆಯನ್ನು ಕುರಿತು ಅತ್ಯದ್ಭುತ ಸಂಶೋಧನೆಗಳನ್ನು ನಡೆಸಿ ಜೀವ ವಿಜ್ಞಾನಕ್ಕೆ ಹೊಸ ತಿರುವನ್ನು ಕೊಟ್ಟ ಹೊಸದರಲ್ಲಿ ಅರಾಸೇ ''ಕೊಲ್ಲಾಜನ್ ಎನ್ನುವುದು....'' ಎಂಬ ಕವನವನ್ನು ಕೊರವಂಜಿ ಓದುಗರಿಗೆ ನೀಡಿದ್ದರು. ಅದರ ಕೆಲವು ಸಾಲುಗಳು ಹೀಗಿವೆ.

......ಯಾರೋ ಯೂಕೆಯ ಹುಡುಗ ಪುಷ್ಪಕುಂಡದ ಚಿತ್ರ
ಮುಂದಿಟ್ಟು ಜೀವಕಣ ರಚನೆ ಇಂತು ವಿಚಿತ್ರ
ವೆಂದ. ಕೇಳಿದ ನಾನು ಪದವ ಕೇಳಿದೆ ಕುಣಿದು.
ಕಣ ಕಣದ ರಚನೆಯಲಿ ವಿವಿಧ ಚಿತ್ರ ರಹಸ್ಯ
ಕೊಲ್ಲಾಜನ್ ಕಣದೊಳಗೆ ತಂತಿ ಬೇಲಿಯ ಮೇಲೆ
ಕಾಲ ಕೀಳ್ಮೊಗ ಮಾಡಿ ಕಪ್ಪೆಲಾಟವ ಲಾಗ
(Triple helical coiled coil
ಅಜ್ಞಾನಿಗಳಿಗೆ ಮಿದುಳಿನ ಬಾಯಿಲ್)
ಕೆಲ ಓತಿಕ್ಯಾತಗಳು ಮಿದುಳಿನಲಿ ಹಲರೀತಿ
ಕೈಕಾಲು ಗುಲ್ಮ ವಪೆ ನರನಾಡಿ ಜಠರರಸ
ಒಂದೊಂದರೊಳಗೊಂದು ತೆರ ಕುಣಿದು ಕುಪ್ಪಳಿಸಿ
ನಾನು ಗೋಡೆಯ ಹಿಂದೆ ಬೀಡಿ ಸೇದುವುದನೂ

ನೀವು ಕಳ್ಳಂಗಡಿಯ ಗಾನ ಪಾಡುವುದನೂ ''ಇದು
ಹೀಗೇ ಸರಿ'' ಎಂದು ನಿರ್ಧರಿಸುತಿಹವಂತೆ......

ನಮ್ಮ ನಡವಳಿಕೆಗಳಿಗೂ ಜೆನೆಟಿಕ್ ಹಿನ್ನೆಲೆ ಇರಬಹುದೇ ಎಂದು ಪ್ರಶ್ನಿಸಿದ ಸಂಜುಂಡಯ್ಯ ಆ ಪ್ರಶ್ನೆಗೆ ಉತ್ತರ ನೀಡುವುದರಲ್ಲಿ ವಿಫಲರಾದಂತೆ ಕಂಡಿತು. ಅವರ ನಂತರ ರೇನೇ ಎಂಬ ಮಹಿಳಾ ವಿಜ್ಞಾನಿಯೊಬ್ಬರು ''ದ ಬಯಾಲಜಿ ಆಫ್ ಲಾಫ್ಟರ್'' ಎಂಬ ವಿಷಯವನ್ನು ಪ್ರತಿಪಾದಿಸಲು ಯತ್ನಿಸಿದರು. ನಗುವಾಗ ಮಾನವನ ಮುಖದಲ್ಲಿನ ಮಾಂಸಖಂಡಗಳು ಯಾವ ರೀತಿ ಸಂಕುಚಿತವಾಗುತ್ತವೆ ಎಂಬ ವಿಷಯದ ಬಗ್ಗೆ ಮಾತನಾಡುತ್ತಾ ''ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ಗಿಲೊಟಿನ್‌ಗಳಿಂದ ಸತತವಾಗಿ ಉರುಳುತ್ತಿದ್ದ ರುಂಡಗಳನ್ನು ಡೂಷೇನ್ ಎಂಬ ವಿಜ್ಞಾನಿಯೊಬ್ಬನು ಸಂಗ್ರಹಿಸಿ ಅವುಗಳಿಗೆ ಒಂದೊಂದಾಗಿ ವಿದ್ಯುತ್ ಷಾಕ್ ನೀಡಿ ಅವುಗಳ ಮುಖ ನಗೆಯಿಂದ ಅರಳುವುದನ್ನು ಗುರುತಿಸಿದ'' ಎಂದೆಲ್ಲಾ ಹೇಳಿದ ರೇನೇಯವರು, ಮಾನವನ ಜಾಗೃತಿಯಲ್ಲಿ ಹಾಸ್ಯಪ್ರಜ್ಞೆಯ ಉಗಮದ ಬಗ್ಗೆ ಯಾವ ಬೆಳಕನ್ನೂ ಚೆಲ್ಲದೇ ಕೊನೆಗೆ ಒಂದು ಜೋಕ್ ಹೇಳಿ ತಮ್ಮ ಉಪನ್ಯಾಸವನ್ನು ಮುಗಿಸಿದರು. ದಾಕ್ಷಿಣ್ಯಕ್ಕೆ ಸಭಿಕರು ಡೂಷೇನ್ ನಗು ನಗಬೇಕಾಯಿತು.

ಮಾರನೆಯ ದಿನದ ಸಭೆಯಲ್ಲಿ ಶಂಕರ್ ಎಂಬುವರು ಜಾಗೃತಿ, ಪ್ರಜ್ಞೆ ಇವುಗಳ ಬಗ್ಗೆ ಶಂಕರಾಚಾರ್ಯರ ಆಲೋಚನಾ ಸರಣಿಯನ್ನು ಸಭಿಕರಿಗೆ ಪರಿಚಯಿಸುತ್ತಾ, ''ಅದು ಏನೆಂಬ ಕಲ್ಪನೆಯಿಲ್ಲದಿದ್ದರೆ, ಅದನ್ನು ಹುಡುಕುವುದು ಅಸಾಧ್ಯ. ಅದು ಏನೆಂದು ತಿಳಿದಿದ್ದರೆ ಅದರ ಹುಡುಕಾಟ ಅನಗತ್ಯ'' ಎಂದು ಪ್ರಾರಂಭಿಸಿ, ''ನನಗೆ ಸುತ್ತಲಿನ ಪರಿಸರದ ಅರಿವು ಇದೆ, ನನಗೆ ನನ್ನ ದೇಹದ ಬಗ್ಗೆ ಅರಿವು ಇದೆ, ನನಗೆ ನನ್ನ ಆಲೋಚನೆಗಳ ಬಗ್ಗೆ ಅರಿವು ಇದೆ, ಎಂಬ ಹೇಳಿಕೆಗಳ ಹಿಂದೆ ''ನನಗೆ ಅರಿವು ಇದೆ'' ಎಂಬ ಸತ್ಯ ಅಡಗಿದೆ. ಈ ಸತ್ಯದಿಂದ ''ನಾನೇ ಅರಿವು'' ಎಂಬುದನ್ನು ಶಂಕರಾಚಾರ್ಯರು ಪ್ರಮಾಣೀಕರಿಸಿದ್ದಾರೆ'' ಎಂದು ಹೇಳಿದಾಗ ತೂಗುಚೇಲಗಳ ಗುಂಪಿನಲ್ಲಿ ಗೊಂದಲವುಂಟಾಯಿತು. ತೂಗುಚೇಲದ ಮುಖಂಡ ''ನೀವು ಶಂಕರ ಭಗವತ್ಪಾದರಿಗೆ ಅಪಚಾರವೆಸಗಿದ್ದೀರಿ. ಅದು ಏನೆಂದು ತಿಳಿಯದಿರುವುದನ್ನು ತಿಳಿಯುವ ಪ್ರಯತ್ನವೇ ವಿಜ್ಞಾನದ ತಳಹದಿ. ಶಂಕರರು ಖಂಡಿತವಾಗಿ ಹಾಗೆ ಹೇಳಿರಲಾರರು'' ಎಂದು ಹೇಳಿ ಒಂದು ತಿರಸ್ಕಾರದ ನಗೆ ನಕ್ಕು ಕುಳಿತರು. ಒಂದು

ಕಚ್ಚೆ ಪಂಚೆ ಎದ್ದು ನಿಂತು "ವಿಜ್ಞಾನಿಗಳು ತಮ್ಮ ಕ್ಷೇತ್ರದಲ್ಲಿ ಪರಿಣತರಿರಬಹುದು. ಪರಿಣತಿ ಇಲ್ಲದ ಕ್ಷೇತ್ರದಲ್ಲಿ ಅವರು ಕಾಲಿಡಬಾರದು. ಮಾನ್ಯ ಉಪನ್ಯಾಸಕಾರರು ಹೇಳಿದ್ದರಲ್ಲಿ ಏನೂ ತಪ್ಪಿಲ್ಲ" ಎಂದರು. ಅಲ್ಲಿಗೆ ಈ ಪ್ರಕರಣ ಮುಗಿಯಿತು ಎಂದುಕೊಂಡಿದ್ದೆ. ಹಾಗಾಗಲಿಲ್ಲ. ತೂಗುಚೀಲ ಮತ್ತು ಕಚ್ಚೆಪಂಚೆಗಳ ನಡುವೆ ಒಂದು ದೊಡ್ಡ ವಾಗ್ಯುದ್ಧವೇ ಪ್ರಾರಂಭವಾಯಿತು. ಕೊನೆಕೊನೆಗೆ ಮಕ್ಕಳ ಜಗಳದಂತೆ "ತಪ್ಪಿದೆ", "ತಪ್ಪಿಲ್ಲ", ಎಂಬ ಮಾತುಗಳು ಪದೇ ಪದೇ ಹೊರಹೊಮ್ಮತೊಡಗಿದಾಗ ಅಧ್ಯಕ್ಷರು ಆ ಜಗಳಕ್ಕೆ ತುಂಡು ಹಾಕಿ ಮುಂದಿನ ಭಾಷಣಕ್ಕೆ ಅವಕಾಶ ಮಾಡಿಕೊಟ್ಟರು. ಮನುಷ್ಯನ ಜೀವನದಲ್ಲಿ ಸದವಕಾಶಗಳು ಅತಿ ವಿರಳವಾಗಿ ಬರುತ್ತವಂತೆ. ಅವು ಬಂದಾಗ ಅವುಗಳನ್ನು ತಪ್ಪದೇ ಗುರುತಿಸಿ ಪ್ರಯೋಜನ ಪಡೆಯಬೇಕಂತೆ. ಹಾಗಾಗಿ ಮುಂದಿನ ಭಾಷಣ ಪ್ರಾರಂಭವಾಗುವುದಕ್ಕೆ ಮುಂಚೆ ನನ್ನ ತಮ್ಮ ಮತ್ತು ನಾನು ಸಭಾಂಗಣದಿಂದ ಹೊರಬಂದೆವು.

ಮನೆಗೆ ಹಿಂತಿರುಗುತ್ತಿದ್ದಾಗ ನಾನು ಪ್ರಕಾಶನನ್ನು ತರಾಟೆಗೆ ತೆಗೆದುಕೊಂಡೆ. "ಅಲ್ಲೋ, ನನ್ನ ಪಾಡಿಗೆ ನಾನು ರಾಮಾಕೃಷ್ಣಾಂತ ಇದ್ದೆ, ನನ್ನ ಇಲ್ಲಿಗೆ ಯಾಕೆ ಎಳೆದುಕೊಂಡು ಬಂದೆಯೋ. ಒಬ್ಬ ಸದ್ಗೃಹಸ್ಥನಿಗೆ (?) ಈ ಒಣ ಚರ್ಚೆಗಳಿಂದ ದೊರಕುವ ಪ್ರಯೋಜನವಾದರೂ ಏನು?" ಅಂತ ಕೇಳಿದೆ.

"ಒಬ್ಬ ಸದ್ಗೃಹಸ್ಥನನ್ನು ಅವನ ಸದ್ಗೃಹಿಣಿಯಿಂದ ಹಲವು ಘಂಟೆಗಳ ಕಾಲವಾದರೂ ಬೇರ್ಪಡಿಸಿ ಹವಾನಿಯಂತ್ರಿತ ಸಭಾಂಗಣದಲ್ಲಿ, ಸುಖಾಸನದ ಮೇಲೆ ಆಸೀನನಾಗುವಂತೆ ಮಾಡಿ ಆ ನೊಂದ ಜೀವಕ್ಕೆ ತಂಪೆರೆಯುವುದು ಒಂದು ಪುಣ್ಯಕಾರ್ಯ ಎಂದು ನಾನು ಭಾವಿಸಿರುವೆ" ಎಂದು ಅವ ಕಾವ್ಯಮಯವಾಗಿ ನುಡಿದ.

ಎಂದಿನಂತೆ ಅವನ ಮಾತಿಗೆ ನನ್ನಲ್ಲಿ ಉತ್ತರವಿರಲಿಲ್ಲ. ಅದಕ್ಕೇ ತೆಪ್ಪಗಾದೆ.

– ಶಿವಕುಮಾರ್

ಹೋಪ್‌ಲೆಸ್ ಕೇಸು

- ನಾರೂಶ್ರೀ ಸೂರಿ

"ಖಾರ ತಿನ್ನಬೇಡಿ ಅಂತ ಹೇಳಿದ್ರಿ, ಅದಕ್ಕೆ ನಾನು ವರ್ಷದಿಂದಲೂ ಬರೀ ತೊವ್ವೆ ಕಟ್ಟನ್ನೇ ತಿನ್ನುತ್ತಾ ಬರತಿದ್ದೀನಿ.... ಮತ್ತೆ ಕಾಫೀ ಕಡಿಮೆ ಮಾಡಿ ಅಂತ ಹೇಳಿದ್ರಿ, ಆರು ತಿಂಗಳಾಯ್ತು ಪೂರ್ತಿ ಬಿಟ್ಟೇ ಬಿಟ್ಟಿದ್ದೀನಿ. ಮತ್ತೆ ಊಟಕ್ಕೆ ಮುಂಚೆ, ಊಟ ಆದಮೇಲೆ, ಊಟಕ್ಕೆ ಬದಲು ಅಂತ ನೀವು ಬರಕೊಟ್ಟ ಔಷಧಾನೆಲ್ಲ ಒಂದೂ ಬಿಡದೆ ತೊಗೋತಾ ಇದ್ದೀನಿ.... ಆದರೇನು ಬಂತು, ಪ್ರಯೋಜನ? ತಿಂಗಳಿಗೆ ನಾಕು ಸಲ ಹೊಟ್ಟೇನಲ್ಲಿ trouble... ಈ ಹಾಳು ಹೊಟ್ಟೇನಲ್ಲಿ ಉರೀ ಮತ್ತೆ ಈ spasm ಅಂತ ಆಗಿ life ಏ ಬೇಜಾರು ಬಂದುಬಿಟ್ಟಿದೆ...."

"ನಾನು ಕಾಲದಿಂದಲೂ ಹೇಳತಾನೇ ಇದ್ದೀನಿ.... ನಿಮ್ಮ ಈ problem physiological ಅಲ್ಲ, psychosomatic ಉ ಅಂತ. ನಿಮ್ಮ problem ಏನೂ ಅಂತಂದ್ರೆ, ಏನಾದ್ರೂ ವಿಷಯ ನಿಮ್ಮ ಕಿವಿಗೆ ಬಿದ್ರೆ, ಅದರ ಬಗ್ಗೇನೇ ಅಯ್ಯೋ, ಮುಂದೆ ಏನು ಗತೀನಪ್ಪ ಹಾಗಾಗಿಹೋದ್ರೆ, ಅಂತ tension ಮಾಡಿಕೊಂಡು ಹೊಟ್ಟೆನೋವು ಬರಿಸ್ಕೊಂಡು ನನ್ನ ಹತ್ರ ಓಡಿ ಬರ್ತಾ ಇರತೀರ... for example, ಅದು ಯಾವಾಗಲೋ ತರಂಗ ಪೇಪರ್‌ನಲ್ಲಿ ಬಂದಿದೆ, ತೊಂಭತ್ತೊಂಭತ್ನೇ ಇಸವೀನಲ್ಲಿ ಪ್ರಳಯ ಆಗಿಹೋಗತ್ತಂತೆ ಅನ್ನೋದರ ಬಗ್ಗೆ ಎಷ್ಟೊಂದು tensed up ಆಗಿಬಿಟ್ಟು ಇನ್ನೇನು ದೊಡ್ಡಾಸ್ಪತ್ರೇಗೇ ಸೇರಿಸಬೇಕೇನೋ ಅನ್ನೋ ಥರಾ ಮಾಡಿಕೊಂಡು ಬಂದಿದ್ರಿ. ಮತ್ತೆ ಮೊನ್ನೆ ಹೆರಾಲ್ಡ್ ಪೇಪರ್‌ನಲ್ಲಿ ವಾಸ್ತುತಜ್ಞ ಸೋಮಯಾಜಿ ಹೇಳಿದ್ದಾರೆ, ಎರಡುಸಾವಿರದ ಏಳರಲ್ಲೋ ಅಥವಾ ಹದಿಮೂರರಲ್ಲೋ ಗುಜರಾತ್ ಭೂಕಂಪಾನ್ನೂ ಮೀರಿಸೋ ಭಾರೀ ಅನಾಹುತ ಬೆಂಗಳೂರಿಗೆ ಅಮರಿಕೊಳ್ಳುತ್ತಂತೆ, ಏನು ಮಾಡೋದಪ್ಪ ತಲೆಕೆಡಿಸ್ಕೊಳ್ಳೋದನ್ನ ಬಿಡದೇ ಇದ್ರೆ, I don't think that any medicine could help you....."

"ಅದು that is something for the future... ಮೊದಲು ನಿನ್ನೆಯಿಂದ ಗೋಳುಹುಯ್ಯಕೋತಾ ಇದ್ದೆಲ್ಲ, ಈ ಹೊಟ್ಟೆ ಒಳಗೆ ನುಳಿತ, ಅದಕ್ಕೇನಾದ್ರೂ ಔಷಧಿ ಕೊಡಿ ಈಗ... ಹೊಟ್ಟೆ ಕೊಂಚ ತಹಬಂದಿಗೆ ಬರಲಿ, ಆಮೇಲೆ ಎಷ್ಟು ಬೇಕಾದ್ರೂ ಭಾಷಣ ಕೇಳೋಕ್ಕೆ ತಯಾರು..."

"ಏನು ಬರೆದು ಕೊಡಲಿ?...."

"ಏನು ಕೊಡತೀರ?..."

ಏನು ಕೊಡತೀರ? ಒಳ್ಳೇ ಚೆನ್ನಾಯಿತು.... ಅಲ್ಲ, ಇದೇನು ಹೋಟೆಲ್ ಕಟ್ಟುಹೋಯಿತಾ ಅಂದುಕೊಂಡು:

"Gelusil, Gelusil MPS, Zinetac, Rantac, Spasmindon, Baralgan..."

''ಅವೆಲ್ಲಾ ಕ್ವಿಂಟಾಲ್ ಲೆಕ್ಕದಲ್ಲಿ ತಿಂದದ್ದಾಗಿದೆ. ಹೊಸಾದು ಯಾವುದೂ ಇಲ್ಲವಾ?''

''ಹೊಸಾದೂ ಅಂದ್ರೆ, ನಾನೂ ನೀವೂ ರಿಸರ್ಚ್ ಮಾಡಿ ಹುಟ್ಟಿಸಬೇಕು, ಅಷ್ಟೇ... ಹಾ, ಒಂದು ನಿಮಿಷ ತಡೀರಿ. ಬೆಳಗ್ಗೆ ಯಾರೋ ಮೆಡಿಕಲ್ ರೆಪ್ರೆಸೆಂಟಟಿವ್ ಬಂದಿದ್ದ... ಅದ್ಯಾವುದೋ ಕೋಪಾರಸ್ ಅನ್ನೋ ಕಂಪನೀದಂತೆ, BLOKIT ಅನ್ನೋದು ಎರಡು ಕ್ಯಾಪ್ಸೂಲ್ ಸ್ಯಾಂಪಲ್ಲು ಅಂತ ಕೊಟ್ಟು ಹೋಗಿದಾನೆ... ತುಂಬಾ ಒಳ್ಳೆ ಔಷಧಿ ಡಾಕ್ಟರೇ, Omeprazone 20 mg ಇದೆ ಇದರಲ್ಲಿ, acid peptic disorders ಅಂತ ಏನೇ ಇರಲಿ, ತುಂಬಾನೇ superior healing rates and faster symptom relief and healing ಅಂತ ಒಂದಿಷ್ಟು ಕೊರೆದು ಹೋದ... ತಗೊಂಡು ನೋಡಿ, ನಾಳಿದ್ದು ಬಂದು ಹೇಳಿ how you are feeling ಅನ್ನೋದನ್ನ...''

ಮತ್ತೆ ಅವರು ಕ್ಲಿನಿಕ್ಕಿಗೆ ಬಂದಾಗ ನೋಡಬೇಕಾಗಿತ್ತು ಅವರ ಮುಖಾನ - ತುಂಬಾ ಗೆಲುವಾಗಿದ್ರು.

"You are a miracle worker, doctor... ನೀವು ಕೊಟ್ಟ ಎರಡು ಕ್ಯಾಪ್ಸೂಲ್ ತಿನ್ನೋಕ್ಕಿಲ್ಲ, ಹತ್ತು ದಿನದಿಂದ ರಾಂಗ್ ಮಾಡತಾ ಇದ್ದ ಹೊಟ್ಟೆ ಈಗ ಹೇಳಿದ ಹಾಗೆ ಕೇಳ್ಕೊಂಡು ಬಿದ್ದಿದೆ.''

''ಹಾಗಾದ್ರೆ ಒಂದು ಕೆಲಸ ಮಾಡೋಣ... maintenance dose ಅಂತ ಒಂದು ಹತ್ತು ಕ್ಯಾಪ್ಸೂಲ್ ಬರಕೊಡತೀನಿ. ಅದು ಮುಗಿದಮೇಲೆ ಬಂದು ಹೇಳಿ... ಗುಣ ಕಂಡ್ರೆ ಒಳ್ಳೇದು. ಇಲ್ಲ ಅಂದ್ರೆ ಮಧ್ಯದಲ್ಲೇ ಬಂದು ನೋಡಿ, ಪರವಾಗಿಲ್ಲ''

ಮೂರನೇ ದಿನಾನೇ ಪಾರ್ಟಿ ಮತ್ತೆ ಹಾಜರ್... ಪೋದ ಮಚ್ಚಾನ್ ತಿರುಂಬಿ ವಂದಾನ್ ಅನ್ನೋ ರೀತೀಲಿ. ಹೊಟ್ಟೆ ಯಾಕೊ ಮತ್ತೆ ಕೈಕೊಡತಿದೆ ಅಂತ ಮುಖ ನೋಡೇ ಹೇಳಬಹುದಾಗಿತ್ತು.

''ಯಾಕೆ, ಏನಾಯಿತು? wonder drug ಅಂತ ಅಷ್ಟೆಲ್ಲಾ ಹೊಗಳತಿದ್ದ ಔಷಧೀನೂ ಹಿಡೀತಿಲ್ಲವೇ, ನಿಮಗೆ...?''

''ಔಷಧಿ ಏನೋ ತುಂಬಾನೇ ಚೆನ್ನಾಗಿದೆ. ಆದ್ರೆ....''

''ಆದ್ರೆ ಅಂದರೆ?...''

''ಮೆಡಿಕಲ್ ಶಾಪ್‌ನಿಂದ ನನ್ನ ಹೆಂಡತಿ ನೀವು ಹೇಳಿದ ಹಾಗೇ ಹತ್ತು ಕ್ಯಾಪ್ಸೂಲ್ ಕೊಂಡುಕೊಂಡು ಬಂದಳು. ಹೊಟ್ಟೇಲಿ ಸಂಕಟ ಇತ್ತು ಅಂತ ಒಂದು ಕ್ಯಾಪ್ಸೂಲ್ ತಗೊಂಡೆ. ಒಂದು ಮುಕ್ಕಾಲು ಗಂಟೇನಲ್ಲೇ ತುಂಬಾನೇ ಹಾಯಿ ಅಂತ ಆಯಿತು. ಅರೆ, ಇವರು ಯಾರಪ್ಪ ಧನವಂತ್ರಿ ವಂಶದವರು, ಇಷ್ಟು ಬೇಗ ಗುಣ ಕೊಡೋ ಔಷಧಿ ಮಾಡಿದೋರು ನೋಡೋಣ ಅಂತ ಆ capsule strip ಅನ್ನ ತಗೊಂಡು ಅಲ್ಲಿದ್ದ ಎಲ್ಲಾ ವಿವರಾನ್ನೂ ಓದಿದೆ.... ಆವಾಗಲಿಂದ ನೋಡಿ ಮತ್ತೆ ಶುರೂ ಹೊಟ್ಟೇನಲ್ಲಿ ತಳಮಳ''

''ಅಂಥದ್ದೇನಿತ್ತು ಅಲ್ಲಿ, ನಿಮಗೆ ಮತ್ತೆ ಹೊಟ್ಟೇನ upset ಮಾಡೋ ಅಂಥಾದ್ದು?...''

''ಔಷಧೀನಲ್ಲಿ ಏನೇನಿದೆ, ಅದನ್ನ ಯಾವ ಕಂಪನೀನವರು ಮಾಡಿದ್ದು ಅಂತನ್ನೋವನ್ನೆಲ್ಲ ಓದಾದ ಮೇಲೆ Retail Price Not To Exceed...ಅನ್ನೋ ಜಾಗಕ್ಕೆ ಬಂದಾಗ...''

''ಹುಂ, ಅಲ್ಲಿಗೆ ಬಂದಾಗ?...''

''Retail Price Per Strip Of Ten Capsules Not To Exceed Rs. 43.20 - LT Extra ಅಂತ ಕೊಟ್ಟಿತ್ತು... ಹೊಟ್ಟೆ ನೋವಿನ ಔಷಧೀಗೆ ಅಂತಲೇ ಹತ್ರ ಹತ್ರ ಒಂಭತ್ತು ರೂಪಾಯಿ ದಿನಾಗ್ಲೂ ಬೋಳಿಸಿಕೋತಾ ಹೋದ್ರೆ, ಹೊಟ್ಟೆಪಾಡಿನ ಗತಿ ಏನಪ್ಪ ಅನ್ನೋ ಚಿಂತೇಲಿ... ಮತ್ತೆ ಶುರೂ ಆಯಿತು ಹಳೇ ಖಾಯಿಲೆ''



ರಾತ್ರಿ ಕಳ್ಳೋದ್ರಾಗೆ
ಬಿದ್ದಿದ್ರೆ ಬಿದ್ಲೀ ಬ್ಯಾಡಾ
ಅಂತಂದ್ರಂತಪ್ಪಾ, ಅದ್ಕೇ
ಅವನು ಹಂಗೆ
ಓಡ್ತೋದ.

‘ಆಪರೇಷನ್ ಫ್ಯೂಲಿಂಗ್ ಏಕಾಂತಯ್ಯ (OFE)

– ಬೂಸ

ಈ ಪ್ರಸಂಗ ನಡೆದು ಸುಮಾರು ನಲವತ್ತು ವರ್ಷಗಳ ಮೇಲೆಯೇ ಸಂದಿದ್ದರೂ ಏಪ್ರಿಲ್ ಮಾಸ ಬಂದಾಗಲೆಲ್ಲಾ ಅದು ಇಂದಿಗೂ ನನ್ನ ಸ್ಮೃತಿಪಟಲದ ಮೇಲೆ ಹಾದುಹೋಗುತ್ತದೆ. ಆಗಿನ್ನೂ ನಾನು 20 ವರ್ಷದ ಹರೆಯದ ಹುಡುಗ. ಕೊಯಮತ್ತೂರಿನ ಒಂದು ಇಂಜಿನಿಯರಿಂಗ್ ಕಾಲೇಜಿನಲ್ಲಿ ಕೆಲಸಮಾಡುತ್ತಿದ್ದೆ. ವಿರಾಮ ವೇಳೆಯಲ್ಲಿ ಯಾರಾದರೊಬ್ಬರ ಟೇಬಲ್ ಬಳಿ ಕುಳಿತು ಅದೂ-ಇದೂ ಮಾತನಾಡುತ್ತಾ ಕಾಲ ಕಳೆಯುವ ವಾಡಿಕೆ. ಹಾಗೆ ಒಂದು ದಿನ ನಮ್ಮ ಕಾಲೇಜಿನ ಕೋಶಾಧಿಕಾರಿಯಾಗಿದ್ದ ಏಕಾಂತಯ್ಯನ ಟೇಬಲಿನಲ್ಲಿ ನಮ್ಮ ವಿರಾಮ ವೇಳೆಯ ಸಮಾವೇಶ ನಡೆದಿದ್ದಾಗ ಮಾತುಕತೆ ಎಲ್ಲಿಂದೆಲ್ಲಿಗೋ ಹೋಗಿ ಏಪ್ರಿಲ್‌ಫೂಲ್ ಮಾಡುವ ವಿಷಯಕ್ಕೆ ಬಂತು ಆಗ ಏಕಾಂತಯ್ಯ ಹೆಮ್ಮೆಯಿಂದ ‘ನೋಡಿ, ಪ್ರತಿ ವರ್ಷವೂ ಏಪ್ರಿಲ್‌ನಲ್ಲಿ ನಾನು ಒಬ್ಬರಲ್ಲ ಒಬ್ಬರನ್ನು fool ಮಾಡುತ್ತಿದ್ದೇನೆಯೇ ಹೊರತು ಇದುವರೆವಿಗೂ ಯಾರಿಗೂ ನನ್ನನ್ನು fool ಮಾಡುವ ಧೈರ್ಯವಾಗಿಲ್ಲ’ ಎಂದು ಜಂಬ ಕೊಚ್ಚಿಕೊಂಡ. ಅದು ನಿಜ. ಸುಮಾರು 35 ವರ್ಷದ ಪ್ರಾಯದಲ್ಲಿದ್ದ ಏಕಾಂತಯ್ಯ ಆಜಾನುಬಾಹು, ಕಟ್ಟುಮಸ್ತಾದ ಆಳು. ಅವನ ಅಗಲವಾದ ಮುಖದಲ್ಲಿ ಅಲ್ಲಲ್ಲಿ ಮೂಡಿದ್ದ ಹಲವು ಸಿಡುಬಿನ ಕಲೆಗಳೊಂದಿಗೆ ಆತ ಮುಂಗೋಪಿ ಬೇರೆ. ಯಾವಾಗಲೂ ತನ್ನ ಕೈಕೆಳಗಿನವರೊಡನೆ ಕೂಗಾಡಿಕೊಂಡು ಜಬರದಸ್ತಿನಿಂದ ಕೆಲಸ ಮಾಡಿಸಿಕೊಳ್ಳುತ್ತಿದ್ದ. ಅದೇ ಆತನಿಗೆ ಸಮಾನರು ಮತ್ತು ಮೇಲಿನವರ ಬಗ್ಗೆ ಟೀಕೆ, ತಿರಸ್ಕಾರ ಭಾವನೆಯೇ ಜಾಸ್ತಿ. ಇಷ್ಟೆಲ್ಲದರ ಜೊತೆಗೆ ಆತ ಕಾಲೇಜು ಕ್ರೀಡಾಚಟುವಟಿಕೆಗಳ ವಹಿವಾಟಿನ ಜವಾಬ್ದಾರಿ ಹೊತ್ತಿದ್ದ ಅಧಿಕಾರ ವರ್ಗದ ಪ್ರತಿನಿಧಿಯಾಗಿದ್ದ. ಇವೆಲ್ಲವುಗಳ ಹಿನ್ನೆಲೆಯಲ್ಲಿ ಅವನ ದರ್ಪಕ್ಕೆ ಎಣೆಯೇ ಇರಲಿಲ್ಲ. ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದ ಬಹಳಷ್ಟು ಜನಕ್ಕೆ ಅವನ ಹತ್ತಿರ ಸುಳಿಯಲೂ ಭಯ. ಆದರೂ ಅದು ಹೇಗೋ ವಯಸ್ಸಿನಲ್ಲಿ ಬಹಳ ಅಂತರವಿದ್ದು ಹೊರನಾಡಿನಿಂದ ಉದ್ಯೋಗಕ್ಕಾಗಿ ಅಲ್ಲಿಗೆ ಬಂದಿದ್ದ ನನ್ನ ಬಗ್ಗೆ ಮಾತ್ರ ಅವನಿಗೆ ಒಂದು ರೀತಿಯ ಅಭಿಮಾನ ಮತ್ತು ಗೌರವ ಕೂಡ. ಇದರಿಂದಾಗಿ ನಮ್ಮಿಬ್ಬರಲ್ಲಿ ಸಲುಗೆ ಬೆಳೆದಿದ್ದರೂ ನಾನು ಮಾತ್ರ ಅದರ ಅಪವ್ಯಯವಾಗದಂತೆ ಆತನೊಡನೆ ಜಾಗರೂಕತೆಯಿಂದಲೇ ವರ್ತಿಸುತ್ತಿದ್ದೆ.

ಆದರೆ ಅಂದು ಮಾತ್ರ ಏಕಾಂತಯ್ಯ ತನ್ನ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದ ಜಂಭ ನನಗೆ ಒಂದಿಷ್ಟೂ ಹಿಡಿಸಲಿಲ್ಲ. ಯಾವಾಗಲೂ ಯಾರನ್ನಾದರೂ ಹಂಗಿಸಿ, ಹಿಂಸಿಸಿ ಸಂತೋಷ ಪಡುವ ಅವನನ್ನು ಬೇರೆಯವರು ಹೇಗೆ ತಾನೆ fool ಮಾಡಲು ಸಾಧ್ಯ? ಈ ವರ್ಷ ನಾನಾದರೂ ಪ್ರಯತ್ನಮಾಡಿ ಆತನ ಗರ್ವವನ್ನು ಅಡಗಿಸಬೇಕೆಂಬ ಈರ್ಷೆ ನನ್ನಲ್ಲುಂಟಾಗಿ ನನಗರಿವಿಲ್ಲದಂತೆಯೇ ನನ್ನ ಬಾಯಿಂದ ಮಾತು ಹೊರಬಿತ್ತು.

''ಏಕಾಂತಯ್ಯನವರೇ, ನೋಡಿ ಇಲ್ಲಿದ್ದೀನಿ ನಿಮ್ಮನ್ನು fool ಮಾಡಲಿಕ್ಕಾಗಿಯೇ ಮೈಸೂರು ದೇಶದಿಂದ ಬಂದಿರುವವನು. ಮುಂದಿನ ಏಪ್ರಿಲ್ ಒಂದರಂದು ನೋಡ್ತಾ ಇರಿ, ನಿಮ್ಮ ಮುಖವನ್ನು ಇಂಗು ತಿಂದ ಮಂಗನ ಹಾಗೆ ಮಾಡ್ತೀನಿ' ಎಂದು ತಿಳಿಹಾಸ್ಯದ ಧಾಟಿಯಲ್ಲಿ ಹೇಳಿದ ಮೇಲೆ ಹಾಗೆ ಮಾತನಾಡಿದ್ದು ತಪ್ಪಾಯಿತೇನೋ ಎಂದು ನನಗೆ ಅನಿಸಹತ್ತಿತು. ಅದರೊಂದಿಗೆ ಏಕಾಂತಯ್ಯ ಏಕದಂ ತಿರುಗಿ ಬಿದ್ದರೆ ಏನು ಮಾಡುವುದು ಅನ್ನುವ ಹೆದರಿಕೆ ಕೂಡ ಮನಸ್ಸಿನಲ್ಲಿ ಉಂಟಾಯಿತು. ಆದರೆ ನನ್ನ ಸವಾಲು ಏಕಾಂತಯ್ಯನ ಭಾವದಲ್ಲಿ ಯಾವ ರೀತಿಯ ಬದಲಾವಣೆಯನ್ನೂ ಉಂಟು ಮಾಡಿದಂತೆ ತೋರಲಿಲ್ಲ. ಅದಕ್ಕೆ ಬದಲಾಗಿ ಆತ ದೊಡ್ಡದಾಗಿ ನಗುತ್ತಾ "Alright, ಪಾರ್ಕಲಾಂ ಅದೇನು ಕರಾಮತ್ತು ಮಾಡುತ್ತೀರೋ ಅಂತ. ಈ ಏಕಾಂತಯ್ಯ ಅಷ್ಟು ಸುಲಭವಾಗಿ ಹಳ್ಳಕ್ಕೆ ಬೀಳುವ ಕುರಿ ಅಂತ ನೀವು ಏನಾದರೂ ತಿಳಿದುಕೊಂಡಿದ್ದರೆ ಅದು ಪ್ರಮಾದವಾಗುತ್ತದೆ. "I accept your challenge" ಅಂತ ಹೇಳುತ್ತಾ ಮತ್ತೊಮ್ಮೆ ದೊಡ್ಡದಾಗಿ ನಕ್ಕ. ನಾನು ಬೆಂಕಿಯೊಂದಿಗೆ ಸರಸವಾಡುತ್ತಿರುವಂತೆ ಅಲ್ಲಿದ್ದ ಒಂದಿಬ್ಬರು ನನ್ನ ಕಡೆ ನೋಡಿದರು. ಅಷ್ಟರಲ್ಲಿ ವಿರಾಮ ವೇಳೆ ಮುಗಿದು ನಮ್ಮ ಮಾತುಗಳಿಗೂ break ಹಾಕಿತ್ತು.

ಈ ಘಟನೆ ನಡೆದು ಎಷ್ಟೋ ದಿನಗಳಾದ ಮೇಲೂ ಆಗೊಮ್ಮೆ ಈಗೊಮ್ಮೆ ಏಕಾಂತಯ್ಯ 'ಏನ್ಸಾರ್ ನನ್ನನ್ನ ಕುರಿ ಮಾಡುವ ಸಿದ್ಧತೆ ಏನಾದರೂ ನಡೆದಿದೆಯೇ. ಅಂದ ಹಾಗೆ ಏಪ್ರಿಲ್‌ಗೆ ಇನ್ನೂ ಬಹಳ ದಿವಸ ಇದೆ ಅಲ್ಲವಾ. ಆಮೇಲೆ ಏನು ಮಾಡುವುದಕ್ಕೆ ಆಗದೆ ಮರೆತುಬಿಟ್ಟೆ ಅಂತ ನೆವ ಹೇಳಬೇಡಿ' ಎಂದೆಲ್ಲಾ ಹಂಗಿಸಿದ್ದರೂ, ಆತ ನನ್ನ ಸವಾಲನ್ನು ಅಷ್ಟೇನೂ ಗಂಭೀರವಾಗಿ ಪರಿಗಣಿಸಿರಲಿಲ್ಲ ಅನ್ನುವ ಅಭಿಪ್ರಾಯ ನನ್ನಲ್ಲಿ ಮೂಡಿಬಂತು. ಈ ರೀತಿಯ ಚುಚ್ಚುಮಾತುಗಳಿಗೆ ನನ್ನಿಂದ ಯಾವ ಪ್ರತಿಕ್ರಿಯೆಯೂ ಬಾರದ ಕಾರಣ ಕಾಲಕ್ರಮೇಣ ಆ ವಿಷಯವನ್ನೇ ಆತ ಮರೆತುಬಿಟ್ಟಂತೆ ನನಗನ್ನಿಸಹತ್ತಿತು. ಆದರೆ ಅಂದು ಅನುದ್ದೇಶಪೂರ್ವಕವಾಗಿ ಏಕಾಂತಯ್ಯನಿಗೆ ನೀಡಿದ್ದ ಸವಾಲನ್ನು

ಕಾರ್ಯಗತಗೊಳಿಸಿಯೇ ತೀರಬೇಕೆಂಬ ದೃಢ ನಿರ್ಧಾರ ಮಾತ್ರ ನನ್ನ ಮನಸ್ಸಿನಲ್ಲಿ ಬಲವಾಗಿ ತಳ ಊರಿತ್ತು.

ದಿನಗಳೆದಂತೆ ನಾನು ಏಕಾಂತಯ್ಯನ ಎಲ್ಲಾ ನಡೆವಳಿಕೆಗಳನ್ನೂ ಗಮನವಿಟ್ಟು ಅಭ್ಯಸಿಸಿ ವಿಮರ್ಶಿಸಲುಪಕ್ರಮಿಸಿದೆ. ಈ ರೀತಿ ಅವ್ಯಾಹತವಾಗಿ ನಾನು ನಡೆಸಿದ ಶೋಧನೆಯ ಪರಿಣಾಮವಾಗಿ ನನ್ನ ಗಮನವನ್ನು ಆಕರ್ಷಿಸಿದ ಅತ್ಯಂತ ಮುಖ್ಯ ವಿಷಯವೆಂದರೆ ಆತ ನಮ್ಮ ಕಾಲೇಜಿನ ಕ್ರೀಡಾ ತಂಡಗಳನ್ನು ಬೇರೆ ಬೇರೆ ಕಾಲೇಜಿನ ಕ್ರೀಡಾ ತಂಡಗಳೊಡನೆ ಮತ್ತು ಹೊರ ಊರಿನ ತಂಡಗಳೊಡನೆ ಆಡಲು ಪಂದ್ಯಗಳನ್ನು ಏರ್ಪಡಿಸುವುದರಲ್ಲಿ ಆತ ತೋರಿಸುತ್ತಿದ್ದ ಎಲ್ಲಿಲ್ಲದ ಆಸಕ್ತಿ ಮತ್ತು ಪರಿಣಿತಿ. ಈ ವಿಷಯವೇ ಏಕಾಂತಯ್ಯನನ್ನು fool ಮಾಡಲು ಬಹಳ ಉಪಯುಕ್ತ ವಸ್ತು ಎಂದು ಹೇಗೋ ನನ್ನ ಮನಸ್ಸಿಗೆ ಬಂತು.

ಈ ಮಧ್ಯೆ ಒಮ್ಮೆ ನಾನು ಬೆಂಗಳೂರಿಗೆ ಹೋಗಬೇಕಾಗಿ ಬಂದು, ಅಲ್ಲಿ MES College ನಲ್ಲಿ ಓದುತ್ತಿದ್ದ ನನ್ನ ತಮ್ಮನ ರೂಮಿನಲ್ಲಿ ತಂಗಿದ್ದಾಗ ಅವನು ತನ್ನ ಕಾಲೇಜಿನ ಗೆಳೆಯರೊಂದಿಗೆ ಸೇರಿ ತನ್ನದೇ ಆದ "Young Enthusiasts Badminton Club ಹೆಸರಿನ ಕ್ರೀಡಾ ತಂಡವನ್ನು ಮಾಡಿಕೊಂಡು ಹಲವಾರು ತಂಡಗಳೊಡನೆ ಪಂದ್ಯವಾಡಿ ಹೆಸರು ಗಳಿಸಿರುವ ವಿಷಯ ನನ್ನ ಗಮನವನ್ನು ಸೆಳೆಯಿತು. ಬಸ್ಸಿನಲ್ಲಿ ಕೊಯಮತ್ತೂರಿಗೆ ಮರು ಪ್ರಯಾಣ ಮಾಡುತ್ತಿದ್ದಾಗ ನನ್ನ ಯೋಚನಾ ಲಹರಿಯಲ್ಲಿ ಏಕಾಂತಯ್ಯ ತನ್ನದೇ ಆದ ಒಂದು Badminton club ಅನ್ನು ನಡೆಸುತ್ತಿದ್ದು ಆ ತಂಡ ಕೂಡ ಹಲವಾರು ಪ್ರಸಿದ್ಧ ಪಂಗಡಗಳ ಮೇಲೆ ಆಡಿ ವಿಜಯ ಸಾಧಿಸಿರುವುದರ ಬಗ್ಗೆ ಜಂಬ ಕೊಚ್ಚಿಕೊಂಡಿದ್ದ ವಿಷಯ ನನಗೆ ತಟಕ್ಕನೇ ನೆನಪಿಗೆ ಬಂದಿತು. ಅದರೊಂದಿಗೆ ಏಕಾಂತಯ್ಯನನ್ನು fool ಮಾಡುವ ಯೋಜನೆಯ ಅಂಕುರಾರ್ಪಣ ನನ್ನ ಮನಸಿನಲ್ಲಾಗಿತ್ತು.

ಮಾರನೆಯ ದಿನದಂದಲೇ "Operation fooling Ekanthaiah' (OFE) ನನ್ನ ತಲೆಯಲ್ಲಿ ಕೆಲಸ ಮಾಡಲು ಪ್ರಾರಂಭವಾಯಿತು. ಆ ಹೊತ್ತಿಗಾಗಲೇ ಫೆಬ್ರವರಿ ತಿಂಗಳ ಕೊನೆಯ ವಾರಕ್ಕೆ ಮುಟ್ಟಿದ್ದುದರಿಂದ ಈ "OFE' ಯನ್ನು ಹುಟ್ಟು ಹಾಕಿ ಬೆಳೆಸಿ ಏಪ್ರಿಲ್ ಒಂದರಂದು ಏಕಾಂತಯ್ಯನನ್ನು ಬಲೆಗೆ ಹಾಕಿಕೊಳ್ಳುವುದಕ್ಕೆ ಕೇವಲ ಒಂದು ತಿಂಗಳ ಕಾಲಾವಕಾಶವಷ್ಟೇ ಇದ್ದದ್ದು. ಆದ್ದರಿಂದ ನನ್ನ ತಮ್ಮನಿಗೆ ತಕ್ಷಣ ಕಾಗದ ಬರೆದು ಅವನಿಗೆ ಏಕಾಂತಯ್ಯನ ವಿವರಗಳನ್ನು ನೀಡಿ, c/o ಏಕಾಂತಯ್ಯ ನಮ್ಮ ಕಾಲೇಜು ವಿಳಾಸಕ್ಕೆ ಅವನ ಟೀಮಿನ Letter Head ನಲ್ಲಿ ಕಾಗದ ಬರೆಯುವಂತೆಯೂ ಅದರಲ್ಲಿ ಮಾರ್ಚ್ 30ನೇ ತಾರೀಖು ಕೊಯಮತ್ತೂರಿನ ಒಂದು ಬ್ಯಾಡ್‌ಮಿಂಟನ್

ಟೀಂನವರೊಂದಿಗೆ ಮ್ಯಾಚ್ ಆಡಲು ಅವನು ತನ್ನ ಟೀಂನೊಂದಿಗೆ ಬರುತ್ತಿರುವುದಕ್ಕಾಗಿಯೂ ಮತ್ತು ಆ team ನವರ ಮುಖಾಂತರ ಏಕಾಂತಯ್ಯನ ಟೀಮಿನ ಬಗ್ಗೆ ಬಹಳ ಕೇಳಿ ತಿಳಿದಿರುವುದರಿಂದ, ಸಾಧ್ಯವಾದಲ್ಲಿ ಮಾರ್ಚ್ 31ರಂದು ಅವರ team ನೊಡನೆಯೂ ಆಡುವ ಬಯಕೆ ಇರುವುದರಿಂದ ಅದಕ್ಕಾಗಿ ಒಪ್ಪಿಗೆ ಕೋರಿ ಬೆಂಗಳೂರಿನಿಂದ ಬರೆಯಲು ಕೇಳಿಕೊಂಡೆ. ಅದರೊಂದಿಗೆ ನನ್ನ ತಮ್ಮನಿಗೆ ನಾನು ಕೈಗೊಂಡಿರುವ OFE ಯೋಜನೆಯನ್ನು ಸೂಕ್ಷ್ಮವಾಗಿ ಪರಿಚಯಿಸಿದೆ. ಇಷ್ಟೆಲ್ಲಾ ಮಾಡಿ ಒಂದು ವಾರದ ಮೇಲಾದರೂ ನನ್ನ ತಮ್ಮ ಕಾಗದ ಬರೆದನೋ ಇಲ್ಲವೋ ಎನ್ನುವುದರ ಬಗ್ಗೆ ನನಗೆ ಯಾವ ರೀತಿಯ ಸುಳಿವೂ ಸಿಗದಿದ್ದಾಗ ಯಾಕೋ ಒಂದು ರೀತಿಯ ಗಾಭರಿಯುಂಟಾಗಹತ್ತಿತ್ತು. ನನ್ನ ತಮ್ಮನಿಗೆ ನನ್ನ ಚೆಲ್ಲಾಟ ಒಪ್ಪಿಗೆಯಾಗಲಿಲ್ಲವೇನೋ. ನಾನು ಅವನೊಡನೆ ಮೊದಲೇ ಮುಖತಃ ಪ್ರಸ್ತಾಪಿಸದೇ ಈ ವಿಷಯವನ್ನು ಪತ್ರಮುಖೇನ ತಿಳಿಸಿದ್ದು ಅವನಿಗೆ ಸರಿಹೋಗಲಿಲ್ಲವೇನೋ ಎಂದೆಲ್ಲಾ ಯೋಚಿಸಲು ಪ್ರಾರಂಭಿಸಿದ್ದೆ. ಈ ಹೊತ್ತಿಗಾಗಲೇ ಹೆಚ್ಚು ಕಮ್ಮಿ ಮಾರ್ಚ್ ಮಧ್ಯ ಭಾಗವನ್ನು ಮುಟ್ಟಿಯಾಗಿತ್ತು. ನಾನಾಗಿ ಈ ವಿಷಯದ ಬಗ್ಗೆ ಏಕಾಂತಯ್ಯನೊಡನೆ ಮಾತನಾಡುವಂತೆಯೂ ಇರಲಿಲ್ಲ.

ಈ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾಗ ಒಂದು ದಿನ ಏಕಾಂತಯ್ಯ ವಿರಾಮ ವೇಳೆಯಲ್ಲಿ ನನ್ನ ಟೇಬಲ್ಲಿಗೆ ಬಂದು 'ಏನ್ಸಾರ್, ನಿಮ್ಮ ಬೆಂಗಳೂರಿನ Young Enthusiasts Badminton Club ಬಗ್ಗೆ ನಿಮಗೇನಾದರೂ ಗೊತ್ತಾ ಸಾರ್. ಎಷ್ಟೋ ಊರುಗಳಿಗೆ ಹೋಗಿ match ಗಳನ್ನಾಡಿ ಗೆದ್ದು ಬಹಳ ಹೆಸರು ಮಾಡಿದ್ದಾರಂತೆ. ಈ ತಿಂಗಳು 30ನೇ ತಾರೀಖು ಈ ಊರಿನ ಒಂದು ತಂಡದವರೊಡನೆ ಮ್ಯಾಚ್ ಆಡಲು ಬರುತ್ತಿದ್ದಾರಂತೆ ಆದ್ದರಿಂದ 31ನೇ ತಾರೀಖು ಅವರು ನಮ್ಮ team ಮೇಲೆ match ಆಡುವ ಸಲುವಾಗಿ ಅನುಮತಿ ಕೋರಿ ಕಾಗದ ಬರೆದಿದ್ದಾರೆ' ಅಂತ ಕೇಳಿದಾಗ ನನ್ನ ತಮ್ಮನ ಬಗ್ಗೆ ನನಗೆ ಅಪಾರ ವಿಶ್ವಾಸ ಮೂಡಿ ಬಂತು. ಬೆಂಗಳೂರಿನ ಯಾವ ಟೀಮಿನ ಬಗ್ಗೆಯೂ ನನಗೆ ಏನೂ ವಿಷಯ ತಿಳಿಯದೆಂದೂ ಆದರೂ ಬೆಂಗಳೂರಿನವರು ಕೊಯಮತ್ತೂರಿಗೆ ಬಂದು ಆಡುತ್ತಿರುವುದನ್ನು ಕೇಳಿ ನನಗೆ ಬಹಳ ಸಂತೋಷ ಉಂಟಾಯಿತೆಂದೂ ತಿಳಿಸಿದೆ. ಅದಕ್ಕೆ ಏಕಾಂತಯ್ಯ 'ಏನೂ ಯೋಚನೆ ಮಾಡಬೇಡಿ. ನಾನು ಈಗಾಗಲೇ ಅವರಿಗೆ ನನ್ನ ಒಪ್ಪಿಗೆಯನ್ನು ಸೂಚಿಸಿ ಉತ್ತರ ಬರೆದಾಯಿತು. ಅಷ್ಟೇ ಅಲ್ಲ ಅವರ ವಸತಿ ಅನುಕೂಲಗಳ ಬಗ್ಗೆ ಏನಾದರೂ ತೊಂದರೆ ಇದ್ದಲ್ಲಿ ಅದಕ್ಕೆ ಅವಶ್ಯವಾದ ಅನುಕೂಲವನ್ನು ನಾನು ಒದಗಿಸುವುದಾಗಿ

ಬರೆದಿದ್ದೇನೆ' ಎಂದು ಹೇಳಿದಾಗ ನನ್ನ ಮನಸ್ಸು ನಿರಾಳವಾಗಿ ತೃಪ್ತಿಯ ನಿಟ್ಟುಸಿರು ಬಿಡುವಂತಾಯಿತು. ನನ್ನ OFE ಯೋಜನೆಯ ಮೊದಲ ಹಂತ ಫಲಪ್ರದವಾದ ಸಂತೋಷ ನನ್ನಲ್ಲಿ ಹೊಸ ಚೈತನ್ಯವನ್ನು ಮೂಡಿಸಿತ್ತು.

OFE ಯೋಜನೆಯ ಮುಂದಿನ ಕ್ರಮಗಳನ್ನು ಕಾರ್ಯಗತಗೊಳಿಸಲು ಕೇವಲ ಹದಿನೈದು ದಿನಗಳ ಕಾಲವಕಾಶ ಮಾತ್ರ ಇತ್ತು. ಮನೆಗೆ ವಾಪಸ್ಸು ಹಿಂತಿರುಗುತ್ತಿದ್ದಂತೆಯೇ ಅಂದೇ ನನ್ನ ತಮ್ಮನಿಗೆ ಒಂದು ಪತ್ರವನ್ನು ಬರೆದು ಅದರಲ್ಲಿ ಅವನ ಪತ್ರಕ್ಕಾಗಿ ಹೃತ್ಪೂರ್ವಕವಾಗಿ ಅಭಿನಂದಿಸಿ ಅವನು ಏಕಾಂತಯ್ಯನ ಕಾಗದಕ್ಕೆ ಉತ್ತರವಾಗಿ ತಂಗುವ ವ್ಯವಸ್ಥೆಯ ಸಲಹೆಯನ್ನು ತಳ್ಳಿಹಾಕಿ, ತಮ್ಮ ಪಂಗಡಕ್ಕೆ ತಿಳಿದವರಿಂದ ವಿಶೇಷ ವ್ಯವಸ್ಥೆಯಾಗಿರುವುದಾಗಿ ತಿಳಿಸಿ ಆ ವಿವರಗಳನ್ನೊಳಗೊಂಡಂತೆ ಇನ್ನೊಂದು ಕಾಗದವನ್ನು ಬರೆಯುವುದಾಗಿ ತಿಳಿಸಿ ಉತ್ತರಿಸಲು ಸೂಚಿಸಿದೆ. ಆ ಪತ್ರವನ್ನು ಅಂಚೆಗೆ ಹಾಕಿ ಬರುತ್ತಿದ್ದಂತೆಯೇ ನನ್ನ ಮನಸ್ಸಿನ ದುಗುಡ ಆತಂಕಗಳು ಪುಟವಾಗಲು ಪ್ರಾರಂಭಿಸಿದವು. ಮತ್ತೆ ನಾನು ಏಕಾಂತಯ್ಯನನ್ನು ಕಾಣುವ ಅವಕಾಶ ದೊರೆತದ್ದು ಮೂರು ನಾಲ್ಕು ದಿವಸಗಳ ನಂತರವೇ. ಅದೇ ದಿನ ಅವನಿಗೆ ನನ್ನ ತಮ್ಮನ ಪತ್ರ ತಲುಪಿದ್ದು ಅದರ ಒಕ್ಕಣೆಯನ್ನು ಸೂಕ್ಷ್ಮವಾಗಿ ಆತ ನನಗೆ ತಿಳಿಸಿದಾಗ ನನ್ನ ಯೋಜನೆ ಇಲ್ಲಿಯವರೆಗೂ ನಿರ್ದಿಷ್ಠ ದಿಕ್ಕಿನಲ್ಲಿ ನಡೆದಿರುವ ವಿಷಯ ನನಗೆ ಸಮಾಧಾನವನ್ನು ತಂದಿತ್ತು.

ಏಪ್ರಿಲ್ ಒಂದಕ್ಕೆ ಇನ್ನು ಒಂದು ವಾರ ಬಾಕಿಯಿದ್ದು ನನ್ನ ಮುಂದಿನ ಹಂತದಲ್ಲಿ ಆ ದಿನ ಏಕಾಂತಯ್ಯನನ್ನು ಚಾಚೂ ತಪ್ಪದೆ ಬಲೆಗೆ ಹಾಕಿಕೊಳ್ಳುವ ವ್ಯವಸ್ಥೆಯಾಗಬೇಕಿತ್ತು, ಅದಕ್ಕಾಗಿ ಅಂದು ರಾತ್ರಿ ಬಹಳ ಹೊತ್ತಿನವರೆಗೆ ಕೂಲಂಕುಶವಾಗಿ ಯೋಜನೆ ಮಾಡಿ ಅದರ ಬಗ್ಗೆ ತೆಗೆದುಕೊಳ್ಳಬೇಕಾಗಿರುವ ಮುಂದಿನ ಕ್ರಮಗಳ ಬಗ್ಗೆ ನನ್ನ ತಮ್ಮನಿಗೆ ಸವಿವರವಾಗಿ ಪತ್ರ ಬರೆದು ಮುರುದಿನ ಬೆಳಗಾಗುತ್ತಿದ್ದಂತೆಯೇ ಅದನ್ನು ಅಂಚೆ ಪೆಟ್ಟಿಗೆಯಲ್ಲಿ ಹಾಕಿ ಬಂದೆ. ಆಗಿನ ಕಾಲದಲ್ಲಿ speed mail ಗಳಾಗಲೀ E-mail ಗಳಾಗಲೀ ಇಲ್ಲದ್ದರಿಂದ ನನ್ನ ಪತ್ರ ಬೆಂಗಳೂರಿಗೆ ತಲುಪಿ ಅದರಲ್ಲಿರುವ ಅಂಶಗಳನ್ನು ನನ್ನ ತಮ್ಮ ಜೀರ್ಣಿಸಿಕೊಂಡು ಏಕಾಂತಯ್ಯನಿಗೆ ಪತ್ರ ಬರೆದು, ಅದು ಕೊಯಮತ್ತೂರನ್ನು ತಲುಪಲು ಕಮ್ಮಿ ಎಂದರೆ ನಾಲ್ಕೈದು ದಿನಗಳಾದರೂ ಬೇಕಾಗುತ್ತಿತ್ತು, ಅಂದರೆ ಮಾರ್ಚ್ 29 ರಂದು ಪತ್ರ ಏಕಾಂತಯ್ಯನನ್ನು ಸೇರುವಂತೆ ಪೂರ್ವಾಪರ ಯೋಚಿಸಿ ನಿಯೋಜಿಸಲಾಗಿತ್ತು, ಆದ್ದರಿಂದ ಮಾರ್ಚ್ 29ರ ವರೆಗೆ ಕಾದು 30ನೇ ತಾರೀಖು ವಿರಾಮ ವೇಳೆಯಲ್ಲಿ ನಾನು ಏಕಾಂತಯ್ಯನಲ್ಲಿಗೆ ಹೋಗುತ್ತಿದ್ದಂತೆಯೇ ಆತ

"ನೋಡಿ, ನಿಮ್ಮ ಬೆಂಗಳೂರಿನವರು ಬರುವ programme ನಲ್ಲಿ ಬದಲಾವಣೆಯಾಗಿಬಿಟ್ಟಿದೆ. ಅವರು 31ನೇ ತಾರೀಖು ಸಾಯಂಕಾಲ ಇಲ್ಲಿಗೆ ಬರುತ್ತಾರಂತೆ. ಮುಂದಿನ ತಿಂಗಳ ಒಂದನೇ ತಾರೀಖು ಇನ್ನೊಂದು ತಂಡದವರೊಡನೆ match ವ್ಯವಸ್ಥೆಯಾಗಿದೆಯಂತೆ. ಆದ್ದರಿಂದ 2ನೇ ತಾರೀಖು ನಮ್ಮೊಡನೆ ಆಡುವ ಸಾಧ್ಯತೆಗಳ ಬಗ್ಗೆ ಚರ್ಚಿಸಲು ಒಂದನೇ ತಾರೀಖು ಅವರು ತಂಗಿರುವ ವಿಳಾಸಕ್ಕೆ ನನ್ನನ್ನು ಬರುವಂತೆ ಕೇಳಿಕೊಂಡು RS puram ನಲ್ಲಿರುವ ಯಾವುದೋ ವಿಳಾಸವನ್ನು ನೀಡಿದ್ದಾರೆ. ಆಕಸ್ಮಿಕವಾಗಿ ಇನ್ನೊಂದು ತಂಡದವರು ಕೇಳಿಕೊಂಡಿದ್ದರಿಂದ ಮಾಡಲೇಬೇಕಾಗಿ ಬಂದ ಈ ಏರ್ಪಾಡಿನಿಂದಾಗಿ ನಮಗೆ ಆದ ಅನಾನುಕೂಲಕ್ಕೆ ಅವರ ಪತ್ರದಲ್ಲಿ ಕ್ಷಮೆ ಬೇಡಿದ್ದಾರೆ. ಈಗ ಅದಕ್ಕೆ ಉತ್ತರ ಬರೆಯುವುದಂತೂ ಸಾಧ್ಯವಿಲ್ಲ. ಏನಿದ್ದರೂ ನಾಡಿದ್ದು ಸಂಜೆ ಅವರನ್ನು ಮುಖತಃ ಭೇಟಿಮಾಡಿ ಬೇರೆಲ್ಲಾ ಏರ್ಪಾಡು ಮಾಡಿಕೊಳ್ಳಬೇಕು" ಅಂದ (ಆ ಪತ್ರದಲ್ಲಿ ನೀಡಿದ್ದ ವಿಳಾಸ RS puram ಬಡಾವಣೆಯಲ್ಲಿ ನಾನು ವಾಸವಿದ್ದ ಮನೆಯದಾಗಿತ್ತು. ಕಾಲೇಜಿನ ನನ್ನ ಇನ್ನು ಮೂವರು ಸಹೋದ್ಯೋಗಿಗಳೊಂದಿಗೆ ಸೇರಿಕೊಂಡು ಅಲ್ಲಿ ಒಂದು ಮನೆಯನ್ನು ಮಾಡಿ ಒಬ್ಬ ಅಡಿಗೆಯವನನ್ನು ಗೊತ್ತುಮಾಡಿಕೊಂಡು ನಾನು ಅಲ್ಲಿ ವಾಸವಾಗಿದ್ದೆ) 'ನೋಡಿ, Last moment ನಲ್ಲಿ ಹೀಗೆಲ್ಲಾ ಆದರೆ ಎಷ್ಟು ಕಷ್ಟ ಅಲ್ಲವಾ, ಈಗೇನು match cancel ಮಾಡ್ತಾ ಇದ್ದೀರಾ' ಅಂತ ಕೇಳಿದೆ.

"ಛೆ, ಛೆ, ಎಲ್ಲಾದರೂ ಉಂಟೆ. ಪಾಪ ಅಷ್ಟು ದೂರದಿಂದ ಅವರು ಅದಕ್ಕಾಗಿ ಬರುತ್ತಿರುವಾಗ ನಾವು ಹಾಗೆ ಮಾಡಿದರೆ ಅವಮಾನ ಮಾಡಿದ ಹಾಗಲ್ಲವೇ? ಈ ವಿಷಯದಲ್ಲಿ ನಿಮ್ಮಿಂದ ನನಗೆ ಒಂದು ಸಣ್ಣ ಸಹಾಯ ಆಗಬೇಕಾಗಿದೆ" ಎನ್ನುತ್ತಾ ಆತ ತನ್ನ ಮನೆಯ phone number ಇರುವ ಒಂದು ಚೀಟಿಯನ್ನು ನನ್ನ ಕೈಯಲ್ಲಿ ಇಟ್ಟು ಮಾರನೆಯ ದಿನ ಸಾಯಂಕಾಲ ನಾನು ಅವನ ಪರವಾಗಿ ಅವರು ನೀಡಿರುವ ವಿಳಾಸಕ್ಕೆ ಹೋಗಿ ಆ ತಂಡದವರು ಬಂದಿರುವುದನ್ನು ಖಚಿತಪಡಿಸಿಕೊಂಡು ಅವನಿಗೆ ವಿಷಯ ತಿಳಿಸಬೇಕೆಂದು ಪ್ರಾರ್ಥಿಸಿಕೊಂಡ. ಅದಕ್ಕೆ ನಾನು ನನ್ನ ಒಪ್ಪಿಗೆ ನೀಡಿ ಇನ್ನು ಹೆಚ್ಚುಕಾಲ ಅವನಲ್ಲಿ ಉಳಿದರೆ ಅಪಾಯವೆಂದು ಭಾವಿಸಿ ಅಲ್ಲಿಂದ ಕಾಲು ಕಿತ್ತೆ.

ನನ್ನ ಯೋಜನೆ ಇಷ್ಟು ಅಚ್ಚುಕಟ್ಟಾಗಿ ನೆರವೇರಬಹುದೆಂದು ನಾನು ಕನಸು ಮನಸಿನಲ್ಲಿಯೂ ಭಾವಿಸಿರಲಿಲ್ಲ. ನನ್ನ ಪುಣ್ಯಕ್ಕೆ match ಆಡುವ ದಿನದ ಮಾತುಕತೆಗಾಗಿ ಪತ್ರದಲ್ಲಿ ಏಪ್ರಿಲ್ 1ನೇ ತಾರೀಖನ್ನು ಸೂಚಿಸಿದ್ದು, ಮತ್ತು ಪತ್ರದಲ್ಲಿದ್ದ ನನ್ನ ಮನೆಯ ವಿಳಾಸ ಇವ್ಯಾವುವೂ ಆತನಲ್ಲಿ ಇದುವರೆವಿಗೆ ಯಾವ

ರೀತಿಯ ಶಂಕೆಗೂ ಆಸ್ಪದ ಮಾಡಿದಂತೆ ತೋರಲಿಲ್ಲ. ಆದರೂ ಆತ ಆ ತಂಡದವರನ್ನು ಭೇಟಿಮಾಡಿ ತನಗೆ phone ಮಾಡಬೇಕೆಂದು ಸೂಚಿಸಿದ್ದು ಮಾತ್ರ ನನ್ನ ನಂಬಿಕೆಯನ್ನು ಅಲುಗಾಡಿಸಿತ್ತು. ಒಂದು ಸಮಯ ನಾನು ಆತನಿಗೆ phone ಮಾಡಿದಾಗ 'ಏನು ಮಿಸ್ಟರ್, ನೀವು ನನಗೆ fool ಮಾಡ್ತೀದಿರೋ ಅಥವಾ ನೀವೇ ನಿಮ್ಮನ್ನು fool ಮಾಡಿಕೊಳ್ತೀದಿರೋ' ಎಂದೇನಾದರೂ ಆತ ಕೇಳಿದರೆ ನನ್ನ ಪರಿಸ್ಥಿತಿ ಏನಾಗಬೇಕು? ಎಂದೆಲ್ಲಾ ಯೋಚನೆ ನನ್ನ ತಲೆಯಲ್ಲಿ ಸುಳಿಯುತ್ತಲೇ ಅಂದು ರಾತ್ರಿಯೆಲ್ಲಾ ನನಗೆ ಸರಿಯಾಗಿ ನಿದ್ರೆ ಕೂಡ ಹತ್ತಲಿಲ್ಲ. ನಾನು ತೋಡಿದ ಹಳ್ಳಕ್ಕೆ ನಾನೇ ಬೀಳುತ್ತಿರುವೆನೇನೋ ಎನ್ನುವ ಭಾವನೆ ರಾತ್ರಿಯಿಡೀ ನನ್ನನ್ನು ಕಾಡಹತ್ತಿತ್ತು. ಕಣ್ಣುಮುಚ್ಚಿ ಅರೆ ನಿದ್ರೆ ಬಂದಾಗಲೂ ಆತ 'ನೋಡಿ, ಇವರು ನನ್ನ fool ಮಾಡಲಿಕ್ಕೆ ಹೋಗಿ ತಾವೇ ಇಂಗು ತಿಂದ ಮಂಗನ ಹಾಗೆ ಆಗಿದ್ದಾರೆ' ಎನ್ನುತ್ತಾ, ಎಲ್ಲರಿಗೂ ನನ್ನನ್ನು ಬೊಟ್ಟುಮಾಡಿ ತೋರಿಸುತ್ತಾ ಗಹಗಹಿಸಿ ನಗುತ್ತಿರುವ ಚಿತ್ರಣವೇ ನನ್ನ ಕಣ್ಣಮುಂದೆ ಬರುತ್ತಿತ್ತು. ಕೊನೆಗೆ ಹಾಗೂ ಹೀಗೂ ಹೊರಳಾಡುತ್ತಾ ರಾತ್ರಿಯ ಬಹಳ ವೇಳೆಯನ್ನು ನಿದ್ರೆ ಇಲ್ಲದೆ ಕಳೆದ ಮೇಲೆ ಬೆಳಗಾಗುವ ಹೊತ್ತಿಗೆ ಚೆನ್ನಾಗಿ ನಿದ್ದೆ ಹತ್ತಿತು.

ಮಾರನೆಯ ದಿನ ಸಾಯಂಕಾಲ ಹತ್ತಿರದಲ್ಲಿದ್ದ ಹೋಟೆಲಿಗೆ phone ಮಾಡಲು ಹೋದಾಗ ಧೈರ್ಯ ಸಾಲದೆ ಒಳಗೆ ನುಗ್ಗಿ ಇಡ್ಲಿ, ವಡೆ, ಕಾಫಿ ಮುಗಿಸಿದೆ. ಮತ್ತೆ ಧೈರ್ಯ ತಂದುಕೊಂಡು ಏಕಾಂತಯ್ಯನಿಗೆ phone ಮಾಡಿದಾಗ 'ಗುಡ್ ಮಾರ್ನಿಂಗ್ ಕಾಫಿ ತಿಂಡಿ ಆಯ್ತಾ' ಅಂತ ಆ ಕಡೆಯಿಂದ ಅವನ ದನಿ ಗುಡುಗಿದಾಗ ಆತ ಇಷ್ಟು ಹೊತ್ತೂ ಇಲ್ಲೇ ಎಲ್ಲಿಂದಲೋ ನನ್ನನ್ನು watch ಮಾಡುತ್ತಿದ್ದನೇನೋ ಅನ್ನುವ ಸಂದೇಹ ನನಗೆ ಉಂಟಾಯಿತು. ಆದರೂ ಧೈರ್ಯಮಾಡಿ ಬೆಂಗಳೂರಿನ ತಂಡ ಆಗತಾನೆ ಬಂದಿಳಿದಿರುವುದಾಗಿಯೂ, ನಾನು ಅವರೊಡನೆ ಮಾತನಾಡಿ ಅಲ್ಲಿಂದಲೇ phone ಮಾಡುತ್ತಿರುವುದಾಗಿಯೂ ಆ ತಂಡದಲ್ಲಿ ನನ್ನ ಪರಿಚಯಸ್ಥರೂ ಇದ್ದಾರೆಂದೂ ತಿಳಿಸಿ, ಮಾರನೆಯ ದಿನ ಅವರು ಆಡಬೇಕಾಗಿರುವ ಪಂದ್ಯ ಮುಗಿದ ಮೇಲೆ ಬಿಡುವಾಗಿರುವುದರಿಂದ ಸಂಜೆ ಐದು ಗಂಟೆಗೆ ಏಕಾಂತಯ್ಯನೊಡನೆ ಮಾತುಕತೆ ನಡೆಸಲು ಇಷ್ಟಪಟ್ಟಿರುವುದಾಗಿ ತಿಳಿಸಿದರೆಂದೂ ವರದಿ ಮಾಡಿದೆ ಆದರೂ ಅದಕ್ಕೆ ಯಾವ ರೀತಿಯ ಉತ್ತರ ಬರಬಹುದು ಎನ್ನುವ ತವಕ ಇನ್ನೂ ಕಮ್ಮಿಯಾಗಿರಲಿಲ್ಲ. ಏನ್ಸಾರ್ ಹಾಗಾದರೆ ನಾಳೆ ಸಾಯಂಕಾಲ ಐದು ಗಂಟೆಗೆ ನಿಮ್ಮನೆಗೆ ಬರಬೇಕು ಅನ್ನಿ ಹಾಗಾದರೆ ಎಂದು ಎಲ್ಲಿ ಚುಡಾಯಿಸುತ್ತಾನೋ ಎನ್ನುವ ಭಯ. ಆದರೆ ಹಾಗೇನು ಆಗಲಿಲ್ಲ. ಅದಕ್ಕೆ ಬದಲಾಗಿ ಆತ ತಾನು ಮಾರನೇ ದಿನ ಐದು ಗಂಟೆಗೆ ಸರಿಯಾಗಿ ಅವರು

ಸೂಚಿಸಿರುವ ಸ್ಥಳಕ್ಕೆ ಬರುವುದಾಗಿಯೂ, ನಾನೂ ಮಾತುಕತೆಯ ಸಂದರ್ಭದಲ್ಲಿ ಅವನೊಡನೆ ಇರಬೇಕೆಂದು ವಿನಂತಿಸಿಕೊಂಡು ಫೋನನ್ನು ಕೆಳಗಿಟ್ಟ.

ಏಪ್ರಿಲ್ ಒಂದರ ಸಾಯಂಕಾಲ ನಾಲ್ಕೂವರೆಯಿಂದಲೇ ನಾನು ಮನೆಯಲ್ಲಿ ಏಕಾಂತಯ್ಯನ ಬರವನ್ನು ಎದುರು ನೋಡುತ್ತಾ ಕುಳಿತೆ. ಐದಾಗಿ, ಐದೂಕಾಲು ಆದರೂ, ಆತನ ಸುಳಿವೇ ಹತ್ತದ್ದರಿಂದ ನನಗೆ ನಿಜಕ್ಕೂ ಮಣ್ಣುಮುಕ್ಕಿದ ಅನುಭವ ಆಗಲಿಕ್ಕೆ ಪ್ರಾರಂಭವಾಯಿತು. ಬೇಸಿಗೆಯ ಧಗೆಯೊಡನೆ ನನ್ನಲುಂಟಾಗುತ್ತಿದ್ದ ಸೋಲಿನ ವೇದನೆಯೂ ಸೇರಿ ನನ್ನ ಮುಖದಿಂದ ಬೆವರು ಧಾರಾಕಾರವಾಗಿ ಹರಿಯಲಾರಂಭಿಸಿತ್ತು. ಆದರೆ ಐದೂವರೆಗೆ ಸರಿಯಾಗಿ ಕರವಸ್ತ್ರದಿಂದ ಯಥೇಚ್ಛವಾಗಿ ಬೆವರುತ್ತಿದ್ದ ಮುಖವನ್ನು ಒರೆಸಿಕೊಳ್ಳುತ್ತಾ 'ನೋಡಿ, ಅಡ್ರೆಸ್ಸಿನಲ್ಲಿ ಅವರು ಕೊಟ್ಟಿರುವ ಮನೆ ನಂಬರ್ ಸರಿಯಾಗಿದೆ ಆದರೆ ಕ್ರಾಸನ್ನು ಮಾತ್ರ ತಪ್ಪಾಗಿ ಬರೆದಿದ್ದಾರೆ. ಕಾಲು ಗಂಟೆಯಿಂದ ಒಂದೊಂದು ಕ್ರಾಸ್‌ನಲ್ಲೂ ಈ ನಂಬರಿನ ಮನೆಯನ್ನು ಹುಡುಕುತ್ತಾ ಇಲ್ಲಿಗೆ ಬರುವುದಕ್ಕೆ ಇಷ್ಟು ಹೊತ್ತು ಆಯಿತು, ಎಲ್ಲಿ, ಬೆಂಗಳೂರಿನ team ನವರೆಲ್ಲಾ ಯಾರೂ ಕಾಣುತ್ತಿಲ್ಲವಲ್ಲಾ?' ಎನ್ನುತ್ತಾ ನಮ್ಮ ಮನೆಯ ಪ್ರವೇಶದ್ವಾರವನ್ನು ಏಕಾಂತಯ್ಯ ಹೊಕ್ಕಾಗ ಒಂದರೆಗಳಿಗೆ ನನಗೆ ಏನು ಉತ್ತರ ಕೊಡಬೇಕೆಂಬುದೇ ತೋಚದಾಯಿತು. ಆದರೂ ತಕ್ಷಣ ಚೇತರಿಸಿಕೊಂಡು 'ಬನ್ನಿ, ಬನ್ನಿ, ನಿಮ್ಮೊಡನೆ ಮಾತನಾಡಬೇಕಾದವರು ಒಳಗಡೆ ಇದ್ದಾರೆ. ಮಿಕ್ಕವರೆಲ್ಲಾ ಸುತ್ತಾಡಿಕೊಂಡು ಬರಲು ಆಚೆಗೆ ಹೋಗಿದ್ದಾರೆ' ಎಂದು ಆಹ್ವಾನಿಸಿದೆ. ಅವರು ಒಳಗೆ ಬರುತ್ತಿದ್ದಂತೆಯೇ ಮನೆಯಲ್ಲಿ ನನ್ನ ಸಹವಾಸಿಗಳಾಗಿದ್ದ ಬಾಲು, ನಟರಾಜ ಅನಮತ್ ಮೂವರೂ ಅವರ ರೂಮುಗಳಿಂದ ಹೊರ ಬರುತ್ತಾ ಆಶ್ಚರ್ಯದಿಂದ 'ಏನ್‌ಸಾರ್ ನೀವು ಇಲ್ಲಿ?' ಎಂದು ತಮಿಳಿನಲ್ಲಿ ಪ್ರಶ್ನಿಸಿದರು. ಬೇರೆಯವರು ಯಾರೂ ಕಾಣದೇ ಈ ಮೂವರನ್ನು ನೋಡುತ್ತಿದ್ದಂತೆ ಏಕಾಂತಯ್ಯನಿಗೆ ಏನೋ ಎಡವಟ್ಟಾಗಿರುವ ಅನುಮಾನ ಬಂದಿರಬೇಕು, ಅದಕ್ಕನುಗುಣವಾಗಿ ನಾನೂ ಕೂಡ ಇದುವರೆವಿಗೆ ನನ್ನ "OFE' ಬಗ್ಗೆ ಯಾರಿಗೂ ಹೇಳದೆ ಗೋಪ್ಯವನ್ನು ಕಾಪಾಡಿದ್ದೆ, ಆದ್ದರಿಂದ ಏಕಾಂತಯ್ಯ ನಮ್ಮ ಮನೆಗೆ ಬಂದದ್ದು ಎಲ್ಲರಿಗೂ ಸೋಜಿಗದ ವಿಷಯವೇ ಆಗಿತ್ತು. ಆಗ ಮಾತ್ರ ಎಲ್ಲರ ಮುಂದೆ ಏಕಾಂತಯ್ಯ April fool ಆಗಿರುವ ಬಗ್ಗೆ ಹೇಳಲು ನನಗೇಕೋ ಕಸಿವಿಸಿಯುಂಟಾಯಿತು. 'ಏನೂ ಇಲ್ಲ ಅವರು ಬೆಂಗಳೂರಿನಿಂದ ಬಂದಿರುವ ಒಂದು Badminton team ನ ಆಟಗಾರರನ್ನು ಸಂಧಿಸಬೇಕಾಗಿತ್ತು. ಯಾರೋ ಅವರಿಗೆ ತಪ್ಪಾಗಿ ಈ ಅಡ್ರೆಸ್ ಕೊಟ್ಟುಬಿಟ್ಟಿದ್ದಾರೆ. ಪಾಪ ಬಿಸಿಲಿನಲ್ಲಿ ಸುತ್ತಾಡಿ ಆಯಾಸವಾಗಿ ನನ್ನನ್ನು ನೋಡಿದ ಮೇಲೆ ಒಳಕ್ಕೆ

ಬಂದರು. ಏನು ಕುಡೀತಿರಾ ಸಾರ್? ಟೀ, cool drinks?' ಅಂತ ಪ್ರಶ್ನಿಸಿದೆ. ಆದರೆ ಏಕಾಂತಯ್ಯ ಎಷ್ಟು ಗರ್ವಿಯೋ ಎಡವಿದ್ದಾಗ ಅಷ್ಟೇ ಸಂಭಾವಿತ ಎನ್ನು ಅನುಭವ ನನಗೆ ಅಂದು ಆಯಿತು. ತಮಿಳಿನಲ್ಲಿ ನನ್ನ ಸ್ನೇಹಿತರನ್ನು ಉದ್ದೇಶಿಸಿ 'ಪರವಾಯಿಲ್ಲೆಯೇ, ನಾನ್ ಮೈಸೂರುಕಾರಂಗೆ ಎನ್ನಮೋ ಅನಿ ನೆನಚಿದ್ದೆ ಇವರ್ ಎನ್ನವೇ ಏಮಾತಿವೆಚ್ಚಾತ್ (ಪರವಾಗಿಲ್ಲವೇ, ನಾನು ಮೈಸೂರಿನವರನ್ನು ಏನೋ ಅಂದುಕೊಂಡಿದ್ದೆ, ಇವರು ನನ್ನನ್ನೇ ಏಮಾರಿಸಿಬಿಟ್ಟರು) ಅಂತ ಹೇಳುತ್ತಾ ನನ್ನನ್ನುದ್ದೇಶಿಸಿ 'ಅದೆಲ್ಲಾ ಒನ್ನೂ ವೇಂಡ ಒರು ಗ್ಲಾಸ್ ಜಿಲ್‌ಅನ್ರ ತಣ್ಣಿ ಕುಡುಂಗೋ ಪೋದು ಇಪ್ಪೊದ' (ಅವೆಲ್ಲಾ ಏನೂ ಬೇಡ ಸದ್ಯಕ್ಕೆ ಒಂದು ಗ್ಲಾಸ್ ತಣ್ಣಗಿರುವ ನೀರು ಕೊಡಿ ಈಗ್ಗೆ) ಅನ್ನುತ್ತಾ ಏಕಾಂತಯ್ಯ ನನ್ನ ಕಡೆ ನೋಡುತ್ತಾ ಕಣ್ಣು ಮಿಟುಕಿಸಿ ನಕ್ಕ.

ಅನರ್ಥಕೋಶ

– ಪ್ರಕಾಶ್

ವಿಪ್ರೋತ್ತಮ	-	ಅಜೀಂ ಪ್ರೇಂಜಿ
ಡಾಲರ್	-	ಎನ್ನಾರೈ ನೋಡಿ
ಪುರಚ್ಚಿ ತಲೈವಿ	-	ಝಾನ್ಸಿ ರಾಣಿ
ಟೇಬಲ್ ಕೆಳಗೆ	-	ವಿಧಾನ ಸೌಧದಲ್ಲಿರುವ ಅಪಾರ ಜಾಗ
ಎನ್ನಾರೈ	-	ಡಾಲರ್ ಏರಿದಂತೆ ಬೀಗುವ ದೇಶದ್ರೋಹಿ!
ತೆರಿಗೆ	-	ಕರ್ಮಫಲ ನೋಡಿ
ಕರ್ಮಫಲ	-	ಭಾರತೀಯರ ಮೆಚ್ಚಿನ ಹಣ್ಣು
ಮಠ	-	'ಮನೆ' ಇಲ್ಲದವರು ಸಿರಿವಂತರಾಗುವ ಸ್ಥಳ.
ಅನಿಕೇತನ	-	ವೀರಪ್ಪನ್ ಅಡಗುತಾಣ
ಬೀಜಾಸುರ	-	ಬಿ.ಟಿ. ಕಾಟನ್

★★★

ಶಿಖರ ಷಟ್ಪದಿ

– ಶಿವು

ನೆರೆಯ ಪಾಕಿನ ಒಡೆಯ ಮುಷರಫ
ಬರುವ ಸುದ್ದಿಯು ಕಿವಿಗೆ ಬೀಳಲು
ಉರಗ ಸದೃಶ ಕೋಪ ದಿಂದಲಿ ಶಿವನ ಸೈನಿಕರು
ನೆರೆದ ಭಕ್ತರ ಜೊತೆಗೆ ಸೇರಿಸಿ
ಗರುವ ದಿಂದಲೆ ಕಿಡಿಯ ಕಾರುತ
ಹಿರಿಯ ನಾಯಕ ಕೆಂಪು ಕೃಷ್ಣನ ಬಳಿಗೆ ಓಡಿದರು ... ॥ ೧ ॥

ದೇವ ಈಶ್ವರನಾಣೆ ವರಶ್ರೀ
ದೇವಿ ಪಾದದ ಆಣೆ ದಶರಥ
ದೇವನಾಣೆ ವಿದಿತ ಎಮಗದು ನಿಮ್ಮ ಆಶಯವು
ನಾವು ಸಂಧಿಯ ನೆವದಿ ಮುಷರಫ
ಭಾವವನು ಕೆಣಕುತ್ತ ಕೋಪವ
ತೀವಿ ಸಂಧಿಯ ಮುರಿದು ಬರುವೆವು ಎಂದನಾಕೃಷ್ಣ ... ॥ ೨ ॥

ಅತ್ತ ಪಾಕಿನ ತೊಯ್ಬ ಯುವಕರು
ಸತ್ತರಸ ಮನೆ ಯತ್ತ ನಡೆಯುತ
ಸುತ್ತಮುತ್ತಲ ಜನರ ಛೇಡಿಸಿ ಭೇಟಿ ಕೇಳಿದರು
ಇತ್ತ ಕೃಷ್ಣನು ಇತ್ತ ಭಾಷೆಯ
ಸತ್ತರನು ಬಿಡಿ ಪದವು ಬದಲದೆ
ಗತ್ತಿನಿಂದಲೆ ಪೇಳೆ, ಹಿಗ್ಗಿತು ಲಷ್ಕರೇತೊಯಿಬ ... ॥ ೩ ॥

ಬಿಳಿಯ ಉಡುಪದು ಶಾಂತಿ ಸೂಚಕ
ಹಳೆಯ ಯುದ್ಧವ ಮರೆತು ನಡೆಯುವ
ಇಳೆಯ ಜನಗಣ ದೃಷ್ಟಿ ದೆಹಲಿಗೆ ಎಂದ ಮುಷರಾಫ
ಒಳಿತು ಬನ್ನಿರಿ ಕುಳಿತು ಕೊಳ್ಳಿರಿ
ಬಳಿಕ ಮುಂದಿನ ದಿನದ ಕಾರ್ಯದ
ಎಳೆಯ ಬಿಡಿಸುತ ಊಟ ಮಾಡುವ ಎಂದ ನಾರಯಣ ... ॥ ೪ ॥

ತಾಜ ಮಹಲಿನ ಹಸಿರು ಅಂಗಣ
ಸ್ಟೇಜಿನಂದದಿ ಸುತ್ತುವರಿದಿರೆ
ಓಜೆಯಿಂದಲಿ ಪಕ್ಕ ಕುಳಿತಳು ಬೇಗಮುಷರಫಳು
ತೇಜಿ ಮುಷರಫ ತನ್ನ ಕೈಯ್ಯನು
ರಾಜಿಸುತ್ತಿಹ ಜೋರು ಕೈಯಲಿ
ರಾಜರೋಷದಿ ಇಡಲು ತೆಗೆದರು ಭಾವಚಿತ್ರಗಳ ... ॥ ೫ ॥


ಕಾಶಮೀರವೆ ನಮ್ಮ ಪ್ರಾಣವು
ಕಾಶಮೀರವೆ ನಮ್ಮ ಉಸಿರದು
ಕಾಶಮೀರವೆ ಕೋರು ಪ್ರಾಬ್ಲಮ್ ಎಂದ ಮುಷರಫನು
ಆಶೆ ಬಿಡು ನೀ ಕಾಶಮೀರದ
ದೋಷಪೂರಿತ ನಿನ್ನ ದೃಷ್ಟಿಯು
ಕಾಶಮೀರದ ಗಡಿಯ ರಕ್ಷಿಪೆ ನೆಂದನಾನಟಳ ... ॥ ೬ ॥

ಸ್ಟಾರು ಟೀವಿಯ ತೆರೆಯ ಮೇಲಣ
ಸ್ಟಾರು ಬ್ರಾಡ್ಕಾಷ್ಟಿಗರು ಹರ್ಷದಿ
ಕಾರುಬಾರವೆ ನಡೆಸಿ ಕುಳಿತರು ಹೆಣೆದು ಊಹಪೋಹ
ಹಾರುನ್ ಆಸ್ಮರು, ರಾಜದೀಪನು
ಏರುಪೇರಿನ ಸುದ್ದಿ ಹರಡುತ
ಮೇರೆಯಿಲ್ಲದ ಆಶ ಗೋಪುರ ದೊಳಗೆ ನೆಲೆಸಿದರು ... ॥ ೭ ॥

ರಾಜ ನೀರೋ ವಾದ್ಯ ನುಡಿಸಿರೆ
ರಾಜ್ಯ ರೋಮದು ಅಗ್ನಿಗಾಹುತಿ
ಒಜ್ಜರದಸಿರಿ ಸಿರಿಯ ನಗರದ ಸೈನ್ಯ ಕೊಲೆಗೀಡು
ಲಜ್ಜೆಯಿಲ್ಲದೆ ಮುಜಹಿ ದೀನರು
ಸಜ್ಜನಿಂದಲಿ ತಮ್ಮ ಜೇಹದ
ರಾಜಿಯಿಲ್ಲದೆ ಮಾಡ ತೊಡಗಲು ಮುಳಿಯಿತಾಜನತೆ ... ॥ ೮ ॥

ನುಡಿದು ಫಲವೇನಿನ್ನು ಮುಷರಫ
ದುಡಿದು ದಿನವಹಿ ದಾರಿಗಾಣದೆ
ಗಾಡಿ ಬಿಟ್ಟನು ಪಾಕಿ ಗಭಿಮುಖ ಮಧ್ಯ ರಾತ್ರಿಯಲಿ
ಒಡನೆ ತನ್ನಯ ಮಂತ್ರಿ ಸುಷುಮಳ
ಒಡೆಯ ಅಟಳನು ತನ್ನ ಕೆಲಸವ
ಮಾಡಲೋಸುಗ ದೆಹಲಿ ತೆರಳಿದ ರಾಜ ವಾಜಪೆಯಿ ... ॥ ೯ ॥

ಕುಣಿದು ಹರ್ಷದಿ ನಗುತ ದಣಿದರು
ಗಣಿತ ತಮ್ಮಯ ಗುರಿಯ ಕಾಣಲು
ಮಣಿದು ಜೀಹಾ ದಿಗಳ ಮೃಣ್ಮಯ ಪಾದ ಪಂಕಜಕೆ
ಋಣವು ಹರಿದುದು ಇಂದು ನಿಜವಿದು
ಕಣಸು ಕಣ್ಣಿನ ನಿದ್ದೆ ಹರಿದುದು
ಬಣದ ಸಂತಸ ಕಂಡು ನಲಿದರು ಆರೆಸೆಸ್ಸಿಗರು ... ॥ ೧೦ ॥



ಸಂಬಳಕ್ಕಿಟ್ಕೊಳ್ಳೋ....

- ಸತ್ಯವತಿ

ಅದೊಂದು ದಂತ ಚಿಕಿತ್ಸಾಲಯ. ತನ್ನ ವೈದ್ಯವೃತ್ತಿಯಲ್ಲಿ ಪಳಗಿದ ಸುಪ್ರಸಿದ್ಧ ಅನುಭವೀ ವೈದ್ಯರು ಶ್ರೀಮಂತ ರೋಗಿಯೊಬ್ಬರ ದಂತ ತಪಾಸಣೆ ಮಾಡುತ್ತಾ, ಈ ಮನುಷ್ಯನಿಗೆ ಮತ್ತಷ್ಟು ಹಲ್ಲುಗಳು ಹಾಳಾಗಿ ತನ್ನ ಬಳಿ ಬಂದರೆಷ್ಟು ಚೆನ್ನ ಎಂದು ಆಲೋಚಿಸುತ್ತಿದ್ದರು.

'ದಂತ' ಎಂಬ ಹೆಸರು ಕಂಡು, ವೀರಪ್ಪನ್ ನುಗ್ಗಿ ಬಂದು ತನ್ನನ್ನು ಅಪಹರಿಸಿದರೇನು ಗತಿ ಎಂದು ಶ್ರೀಮಂತರು ಚಿಂತಿಸುತ್ತಿದ್ದರು.

ನಾಯಿಕೊಡೆಗಳ ಹಾಗೆ ಹುಟ್ಟಿಕೊಂಡ ಡೆಂಟಲ್ ಕಾಲೇಜಿಗೆ ಮಣ್ಣು ಹೊತ್ತು; ರಕ್ತ ಬೀಜಾಸುರನ ವಂಶದವರಂತೆ ಹುಟ್ಟಿಬಂದ ಮರಿ ದಂತವೈದ್ಯರುಗಳ ಪೈಕಿ ಒಬ್ಬಳಾದ ತನ್ನ ಮೊಮ್ಮಗಳನ್ನು ಬಹು ನುರಿತವಳನ್ನಾಗಿ ಮಾಡಲು ಈ ವೈದ್ಯರ ಬಳಿಗೆ ಕರೆತಂದ ಅಜ್ಜಪ್ಪ, ಕರೆಯದಿದ್ದರೂ ಬಂದ ತಮಗೆ ಯಾವ ರೀತಿಯ ಮೋಕ್ಷ ದೊರೆಯಬಹುದೆಂದು ಚಿಂತಿಸುತ್ತಿದ್ದರು.

ದಂತಚೋರ, ಮಾನವ ಚೋರ ವೀರಪ್ಪನ್ ಬರುವ ಮೊದಲು ಇಲ್ಲಿಂದ ಪರಾರಿಯಾಗಬೇಕೆಂದು ಚಿಂತಿಸುತ್ತಿದ್ದ ಶ್ರೀಮಂತರು, ವೈದ್ಯರಿಂದ ವಿಮುಕ್ತಿ ದೊರೆತೊಡನೆ ಅವಸರವಸರದಿಂದ ಕಾಲ್ಕೀಳಲು, ಹಲ್ಕಿರಿಯುತ್ತಾ ಅಜ್ಜಪ್ಪ ಮೊಮ್ಮಗಳ ಸಮೇತ 'ಕ್ಲೋಸ್-ಅಪ್' ಟೂತ್‌ಪೇಸ್ಟಿನ ಜಾಹೀರಾತಿನಂತೆ ಸೆಟ್ಟು ಹಲ್ಲನ್ನು ಪ್ರದರ್ಶಿಸುತ್ತಾ ಮುಂದಡಿಯಿಟ್ಟ. ಮೊದಲು ಬಂದ ಬೇರೆ ರೋಗಿಗಳತ್ತ ಬೊಟ್ಟು ಮಾಡಿ ತೋರಿಸುತ್ತಾ ತಡೆಯುತ್ತಿದ್ದ ಕಾಂಪೌಂಡರ್‌ನತ್ತ ತಿರುಗಿ "ನಾವು ರೋಗಿಗಳಲ್ಲ; ಡಾಕ್ಟರ್‌ಗಳು. ಹೂಂ!" ಎಂದು ಕೆಂಡಕಾರಿ ಒಳನುಗ್ಗಿದ.

ಡೆಂಟಲ್ ಚೇರ್‌ನತ್ತ ಹೋಗುವಂತೆ ವೈದ್ಯರು ಸೂಚಿಸುತ್ತಿದ್ದರೂ, ಅದರತ್ತ ತಾತ್ಸಾರ ದೃಷ್ಟಿ ಬೀರಿದ ಅಜ್ಜಪ್ಪ, ತನ್ನ ಮೊಮ್ಮಗಳನ್ನು ಪರಿಚಯಿಸುತ್ತಾ ಕೆಲಸಕ್ಕೆ ಇಟ್ಟುಕೊಳ್ಳುವಂತೆ ದುಂಬಾಲು ಬಿದ್ದ.

"ಅರೆ! ನಾನು ಅಸಿಸ್ಟೆಂಟ್ ಬೇಕೆಂದು ಜಾಹೀರಾತು ಕೊಟ್ಟಿಲ್ಲವಲ್ಲಾ" ಎನ್ನುತ್ತಾ ಹಿರಿಯ ವೈದ್ಯರು ತಲೆ ಕೆರೆದುಕೊಂಡರು.

"ಜಾಹೀರಾತು ಕೊಡದಿದ್ದರೇನಾಯ್ತು? ನಾವಾಗಿ ಬಂದಿದ್ದೇವಲ್ಲಾ. ಇವಳು ಇಲ್ಲೇ ಇರಲಿ. ಇದ್ದು, ನೀವು ಹೇಗೆ ಕೆಲಸ ಮಾಡ್ತೀರೀಂತ

ನೋಡಿಕೊಳ್ಳಲಿ! ತಿಂಗಳಿಗೆ ಅಷ್ಟೋ ಇಷ್ಟೋ ಇವಳ ಖರ್ಚಿಗೇಂತ ಕೊಟ್ಬಿಡಿ'' ಹಿರಿಯಜ್ಜ ಹುರಿಗಡಲೆ ತಿಂದಷ್ಟೇ ಸಲೀಸಾಗಿ ಹೇಳಿದ.

''ಸಂಬಳ ಬೇರೆ ಕೊಡ್ಬೇಕೆ? ಇವಳು ಸುಮ್ಮನೆ ಕುಳಿತು ನನ್ನ ಕೆಲಸ ನೋಡೋದಕ್ಕೇ ನಾನವಳಿಗೆ ಸಂಬಳ ಕೊಡ್ಬೇಕೆ? ಇದು ತೀರಾ ಅನ್ಯಾಯ'' ವೈದ್ಯರು ಒಪ್ಪಲಿಲ್ಲ.

ವೈದ್ಯರನ್ನು ಒಪ್ಪಿಸಲು ತನ್ನ ತಲೆಯನ್ನೆಲ್ಲಾ ಖರ್ಚು ಮಾಡಿ ನೋಡಿದ ಅಜ್ಜಪ್ಪ. ವೈದ್ಯರು ಬಗ್ಗಲಿಲ್ಲ. ಯಾವ ರೀತಿಯಲ್ಲೂ ತನ್ನ ಮಾತಿಗೆ ಜಗ್ಗದ ವೈದ್ಯರನ್ನು ತಿರಸ್ಕಾರ ದೃಷ್ಟಿಯಿಂದ ಅಳೆಯುತ್ತಾ,

''ನಿಮಗಿದ್ದರಲ್ಲವೇ ಇನ್ನೊಬ್ಬರಿಗೆ ಸಂಬಳ ಕೊಡುವುದು?'' ಎಂಬ ದಿವ್ಯ ನುಡಿ ಮೌಕ್ತಿಗಳನ್ನು, ಈಗಾಗಲೇ ಐದಾರು ಜನ ಅಸಿಸ್ಟೆಂಟ್‌ಗಳನ್ನು ಹೊಂದಿದ್ದ ವೈದ್ಯರ ಮೇಲೆ ಹೇರಿ, ಮನಸ್ಸಿಲ್ಲದ ಮನಸ್ಸಿನಿಂದ ಮೊಮ್ಮಗಳೊಂದಿಗೆ ಎದ್ದು ಹೋದ ಅಜ್ಜಪ್ಪ.

ಕರೆಯದೇ ಬಂದು, ಕೆರದಲ್ಲಿ ಹೊಡೆದಷ್ಟೇ ಘನಹೀನ ವಾಕ್ಯಗಳನ್ನಾಡಿ, ದುರ್ದಾನ ತೆಗೆದುಕೊಂಡವರಂತೆ ತಿರುಗಿಯೂ ನೋಡದೆ ತೆರಳುತ್ತಿದ್ದ ಅವರನ್ನು ಬಾಯಿತೆರೆದು ನೋಡುತ್ತಿದ್ದ ದಂತಪ್ಪ ದಂತವೈದ್ಯರ ಮೂವತ್ತೆರಡೂ ಹಲ್ಲುಗಳು, ಆಗಷ್ಟೇ ಒಳಹೊಕ್ಕ ಇನ್ನೊಬ್ಬ ರೋಗಿಗೆ ಸ್ವಾಗತ ನೀಡಿದವು.

★★★

''ಡಿಂಗ್... ಡಾಂಗ್'' ಕರೆಗಂಟೆ ಮೊಳಗಿತು.

ನಾಲ್ಕು ತಿಂಗಳ ಗರ್ಭಿಣಿ ಲಕ್ಷ್ಮಿ ನಿಧಾನವಾಗಿ ನಡೆದು ಬಂದು ಬಾಗಿಲು ತೆರೆದಳು. ಎದುರಲ್ಲಿ ಮೋರೆಗೆ ಧಾರಾಳವಾಗಿ ಪೌಡರ್ ಸವರಿ, ತುಟಿಗಳಿಗೆ ರಂಗನ್ನು ಮೆತ್ತಿದ್ದ ಷೋಡಶಿಯೋರ್ವಳು ವ್ಯಾನಿಟಿ ಬ್ಯಾಗ್ ಅಲ್ಲಾಡಿಸುತ್ತಾ ನಿಂತಿದ್ದಾಳೆ.

''ನೀವು ಲಕ್ಷ್ಮೀ ಆಂಟೀನಾ?'' ಸ್ಟೈಲಾಗಿ ಕೇಳಿದಾಕೆ.

ಈ ಅಪರಿಚಿತೆ ಇದೇ ವಠಾರದವರ್‍ಯಾರೋ ಆಗಿರಬೇಕು. ತಾನು ಹೊಸತಾಗಿ ಬಂದಿರುವುದರಿಂದ ತನಗೆ ತಿಳಿಯದೆಂದು ಭಾವಿಸಿ, ಮುಗುಳುನಗೆ ಬೀರುತ್ತಾ, ''ಹೌದು; ಬನ್ನಿ, ಬನ್ನಿ, ಕೂತ್ಕೊಳ್ಳಿ, ಕೂತುಕೊಂಡೇ ಮಾತಾಡೋಣ'' ಎಂದು ಸ್ವಾಗತಿಸುತ್ತಾ ಉಪಚರಿಸಿದಳು ಲಕ್ಷ್ಮಿ.

ಸೋಫಾದ ಮೇಲೆ ಬಿಂಕದಲ್ಲಿ ಕುಳಿತ ಆ ಬಿಂಕಗಾತಿಯನ್ನು ಕುರಿತು, ''ಆದರೆ... ನೀವ್ಯಾರೂಂತ ಗೊತ್ತಾಗಲಿಲ್ಲ....'' ಎಂದು ತಡವರಿಸಿದಳು ಲಕ್ಷ್ಮಿ.

''ನೀವು ಮನೆಕೆಲಸಕ್ಕೆ ಜನ ಬೇಕೂಂತ ಹೇಳಿದ್ದಿರಂತೆ. ಹೌದಾ ಆಂಟಿ?''

''ಹೌದು, ನಿಮಗೆ ಯಾರಾದರೂ ಗೊತ್ತಾ? ನಿಮ್ಮ ಮನೆಯಲ್ಲಿ ಕೆಲಸ ಮಾಡುವಾಕೆಗೆ ನಮ್ಮ ಮನೆಯಲ್ಲೂ ಮಾಡಲಿಕ್ಕೆ ಆಗುತ್ತಾ?'' ಆತುರದಿಂದ ಒಂದೇ ಉಸುರಲ್ಲಿ ಕೇಳಿದಳು ಲಕ್ಷ್ಮಿ ಆಸೆಯಿಂದ.

''ನಾನೇ ಕೆಲಸಕ್ಕೆ ಬಂದವಳು!'' ಸ್ವಪರಿಚಯ ಮಾಡಿಕೊಂಡಳಾಕೆ.

ಗಂಟಲೊಣಗಿ, ಕಣ್ಣು ಕತ್ತಲಿಟ್ಟಿತು ಲಕ್ಷ್ಮಿಗೆ. ಸಾವರಿಸಿಕೊಂಡು ನೀರು ಕುಡಿದು ಬಂದಳು.

ಮನೆಯ ಮೂಲೆ ಮೂಲೆಯನ್ನೂ ಕಣ್ಣಲ್ಲೇ ಅಳೆಯುತ್ತಿದ್ದ ಡೊಂಕು ಮೈಯಿನ ಸಿಂಗಾರಿ ಏನೇನು ಕೆಲಸ ಉಂಟೆಂದು ವಿಚಾರಿಸಿದಳು.

''ಕಸ ಗುಡಿಸುವುದು, ಒರೆಸುವುದು, ಮುಸುರೆ ಪಾತ್ರೆ ತಿಕ್ಕುವುದು, ಬಟ್ಟೆ ಒಗೆಯುವುದು....'' ಎಂದು ಲಕ್ಷ್ಮಿ ಅನುಮಾನದಿಂದಲೇ ಕಳ್ಳದನಿಯಲ್ಲಿ ಉಸುರುತ್ತಿದ್ದಂತೆ

''ನಾನು ಎರಡು ದಿನಕ್ಕೊಮ್ಮೆ ಮಾತ್ರ ಕಸ ಗುಡಿಸೋದು. ವಾರಕ್ಕೆ ಒಂದೇ ಸಲ ಒರೆಸೋದು. ದೊಡ್ಡ ಪಾತ್ರೆ, ಮಸಿ ಪಾತ್ರೆ, ಎಣ್ಣೆ ಜಿಡ್ಡಿನ ಪಾತ್ರೆಗಳನ್ನು ತೊಳೆಯಲ್ಲ. ಎಂಜಲು ತಟ್ಟೆಗಳನ್ನು ಮುಟ್ಟಲ್ಲ; ಅದು ಗಲೀಜಲ್ವಾ? ಬಗ್ಗಿ ಒಗೆದರೆ, ಹಿಂಡಿದರೆ ನನ್ನ ಮೈಗೆ ಆಗಲ್ಲ. ವಾಷಿಂಗ್ ಮೆಷಿನ್ ಇದೆಯಾ ಹೇಳಿ. ಅದು ಇದ್ರೆ ಮಾತ್ರ ಬಟ್ಟೆ ಒಗೀತೀನಿ. ಒಂದೊಂದು ಕೆಲಸಕ್ಕೂ ತಿಂಗಳಿಗೆ ಕನಿಷ್ಠ ಅಂದರೆ ಮುನ್ನೂರು ರೂಪಾಯಿ ಕೊಡ್ಬೇಕು, ಅಡ್ವಾನ್ಸ್ 3 ಸಾವಿರ ರೂಪಾಯಿ! ಅದನ್ನು ನೀವು ಈಗಲೇ ನನಗೆ ಕೊಡಬೇಕು, ಇದರಲ್ಲಿ ಸ್ವಲ್ಪ ವ್ಯತ್ಯಾಸವಾದರೂ ನಮ್ಮ 'ಮನೆಕೆಲಸದವರ ಯೂನಿಯನ್' ನಿಂದ ಕೇಸ್ ಹಾಕ್ತೀವಿ.''

ಎಂದು ಅಧಿಕಾರಯುತವಾಗಿ ನುಡಿದ ವಯ್ಯಾರಿಯ ಮಾತುಗಳನ್ನು ಅರಗಿಸಿಕೊಳ್ಳುತ್ತಾ ಕುಕ್ಕರಿಸಿದಳು ಲಕ್ಷ್ಮಿ.

★★★

ಅಂದೊಮ್ಮೆ ರಾಷ್ಟ್ರೀಕೃತ ಬ್ಯಾಂಕ್ ಒಂದಕ್ಕೆ ಹೋಗುವ ಸುಯೋಗ ತಿಮ್ಮರಾಯಗೆ ಒದಗಿ ಬಂದಿತು. ಅತ್ಯಂತ ಆನಂದದಿಂದ ಬ್ಯಾಂಕನ್ನು ಪ್ರವೇಶಿಸಿದ

ತಿಮ್ಮರಾಯ ತಾನು ಅತೀ ಜರೂರಾಗಿ ಹಾಗೂ ಅತ್ಯಗತ್ಯವಾಗಿ ಕಾಣಲೇಬೇಕಾಗಿದ್ದ ಪ್ರಬಂಧಕರಿಗಾಗಿ, ಬ್ಯಾಂಕಿನ ತುಂಬಾ ಕಣ್ಣಿನಲ್ಲೇ ತಡಕಾಡಿದ. ಊಹೂಂ... ಎಲ್ಲೂ ಇಲ್ಲ. ಸಾಹಿತ್ಯಕ್ಕೆ ಸಂಬಂಧಿಸಿದ ಪ್ರಬಂಧವಲ್ಲದಿದ್ದರೂ, ಬಡ್ಡಿ-ಸಾಲದ ಪ್ರಬಂಧವನ್ನಾದರೂ ಹೆಸರಿಗೆ ತಕ್ಕಂತೆ ಬರೆಯುತ್ತಾ ಕುಳಿತಿರಬೇಕಾಗಿದ್ದ ಅವರು ನಾಪತ್ತೆಯಾಗಿದ್ದರು. ಅವರ ಕೋಣೆಯಲ್ಲಿ ಅವರ ನಾಮಫಲಕ ಮಾತ್ರ ವಿರಾಜಿಸುತ್ತಿತ್ತು. ಆದರೆ ಜನ ಕಾಣೆ!

'ಯಾರೂ ಇಲ್ಲದ ಕೋಣೆಗೆ ಕೋಣನ ಹಾಗೆ ನುಗ್ಗುವುದೆಂತು?' ಎಂದು ಚಿಂತಿಸುತ್ತಿದ್ದ ತಿಮ್ಮರಾಯನನ್ನು ಬಕ್ಕತಲೆಯ ಟೈಪಿಸ್ಟ್ ಕೂರುವಂತೆ ಉಪಚರಿಸಿ, ಎಲ್ಲಿಯೋ ಇದ್ದ ಕುರ್ಚಿಯನ್ನು ತಂದು ಹಾಕಿ ಉಪಚರಿಸಲು, ತಿಮ್ಮರಾಯನಿಗೆ ಗತ್ತು ಏರಿತು. ಕತ್ತು ಎತ್ತಿ, ಮುಖವನ್ನು ಸೊಟ್ಟ ಮಾಡಿಕೊಂಡು ಬಿಮ್ಮನೆ ಕುಳಿತ. ಕುಳಿತೇ ಇದ್ದ. ಎಲ್ಲರೂ ಅವರವರ ಕಾರ್ಯದಲ್ಲಿ ಮಗ್ನರಾಗಿ, ತಲೆಯನ್ನು ಫೈಲಿನೊಳಗೇ ಇಟ್ಟುಬಿಟ್ಟಿದ್ದರು.

ನಗದು ಕೌಂಟರ್‌ನಲ್ಲಿ, ಬಿಡದೇ ನಗದನ್ನು ಲೆಕ್ಕ ಮಾಡೀ ಮಾಡೀ ಸುಸ್ತಾಗಿ, ನೋಟುಗಳು ಕೋಟದ್ದೇ? ತಾಜದ್ದೇ? ಎಂದು ಪರೀಕ್ಷಿಸಿ ಪರೀಕ್ಷಿಸಿ 'ಪರೀಕ್ಷಿತ'ನೇ ಆಗಿ ಹೋಗಿದ್ದ ಬಡಪಾಯಿಯೊಬ್ಬ 'ನನ್ನ ನಂತರ ನನ್ನ ಶತ್ರುವಿಗೇ ಈ ಕೆಲಸ ಸಿಗಲಿ'' ಎಂದು ಹಂಬಲಿಸುತ್ತಿದ್ದ.

ಮೂಲೆಯ ಕುರ್ಚಿಯೊಂದರಲ್ಲಿ ಬೀಗಿತ್ತಿಯಂತೆ ಬೀಗುತ್ತಿದ್ದ, ಮದರಾಸಿನ ಮಹಿಷದಂತೆ ಮಿರಿಮಿರಿ ಮಿರುಗುತ್ತಿದ್ದ, ಆನೆಗಾತ್ರದ ಗಜವದನೆ ಅಲ್ಲಲ್ಲ..... ಗಜಗಮನೆಯೊಬ್ಬಳು ಮಾತ್ರ ಸರ್ವಾಲಂಕಾರಭೂಷಿತಳಾಗಿ, ತನ್ನಲ್ಲಿದ್ದ ಚಿನ್ನವನ್ನೆಲ್ಲಾ ಧರಿಸಿ, ತಾನೇ 'ಕನಕಾಲಯ'ದಂತೆ ಕಂಗೊಳಿಸುತ್ತಾ, ಸಕಲರ ಕೆಲಸಗಳನ್ನೂ ಕಡೆಗಣ್ಣಿನಿಂದಲೇ ಅಳೆಯುತ್ತಿದ್ದಳು.

ಆಗಾಗ್ಗೆ ಟೈಪಿಸ್ಟ್ ಮಾತ್ರ ಚುರುಕಾಗಿ ಎಲ್ಲಾ ಟೇಬಲ್‌ಗಳ ಬಳಿ ಸಾರಿ, ಪಿಸುಗುಟ್ಟಿ, ದಪ್ಪ ದಪ್ಪ ಕಡತಗಳನ್ನು ಅವರಿವರಿಗೆ ಸಾಗಿಸುತ್ತಾ ತಿರುಗುತ್ತಿದ್ದ. ನಿಜ ಹೇಳಬೇಕೆಂದರೆ ಆತನೇ ಅಲ್ಲಿಯ ಜೀವಾಳವಾಗಿದ್ದ.

ಅರ್ಧತಾಸು, ಮುಕ್ಕಾಲು ತಾಸು ಕಳೆದರೂ ಪರಿಸ್ಥಿತಿ ಏಕರೀತಿಯಲ್ಲೇ ಇರಲು, ತನ್ನ ಜರೂರು ಕೆಲಸವನ್ನು ನೆನೆಸಿಕೊಂಡ ತಿಮ್ಮರಾಯ ಗಂಟಲು ಸರಿಪಡಿಸಿಕೊಂಡು, ತನ್ನನ್ನು ಪ್ರಪ್ರಥಮವಾಗಿ ಉಪಚರಿಸಿದ ಟೈಪಿಸ್ಟನ್ನು ಕುರಿತು ಯಕ್ಷನಂತೆ ಪ್ರಶ್ನಿಸಿದ.

''ಮ್ಯಾನೇಜರ್ ಇಲ್ವಾ?''

ಆತ ಟಪಟಪ ಮಾಡುತ್ತಲೇ ಜಾಹಿರಾತಿನ ಮುಗುಳುನಗೆಯನ್ನು ಪ್ರದರ್ಶಿಸಿ ''ಇದ್ದಾರಲ್ಲಾ'' ಎಂದ.

ಸುತ್ತಲೂ ಕಣ್ಣಾಡಿಸಿದ ತಿಮ್ಮರಾಯನ ದೃಷ್ಟಿ 'ಕನಕಾಲಯ'ದಲ್ಲಿ ನಿಂತಿತ್ತು. ತಿಮ್ಮರಾಯನ ನೇತ್ರಗಳನ್ನೇ ದಿಟ್ಟಿಸುತ್ತಿದ್ದ ಟೈಪಿಸ್ಟ್ ಆತನ ಪ್ರಶ್ನಾರ್ಥಕ ದೃಷ್ಟಿಗೆ ಉತ್ತರರೂಪವಾಗಿ

''ಅವರು ಅಟೆಂಡರ್, ನಾನು ಮ್ಯಾನೇಜರ್'' ಎನ್ನಬೇಕೆ?

ಕಕ್ಕಾಬಿಕ್ಕಿಯಾದ ತಿಮ್ಮರಾಯನಿಗೆ ಅಟೆಂಡರ್‌ನ ಕೆಲಸ ಎಂದರೆ 'ವೀಕ್ಷಣೆ' ಹಾಗೂ ಪ್ರಬಂಧಕರ ಕೆಲಸ ಎಂದರೆ 'ಪ್ರದಕ್ಷಿಣೆ'ಯೋ ಹೇಗೆ ಎಂಬ ಅನುಮಾನ ಉಂಟಾಯ್ತು.

''ನನ್ನಿಂದ ನಿಮಗೇನು ಸಹಾಯ ಬೇಕು? ನೀವು ನನ್ನನ್ನೇ ಕಾಣಲು ಬಂದವರಾ?'' ಮುಂತಾಗಿ ವಿನಯದಿಂದ ಪ್ರಶ್ನಿಸುತ್ತಿದ್ದ ಪ್ರಬಂಧಕರಿಗೆ,

''ನಿಮ್ಮ ಯಾವ ಯಾವ ಕೆಲಸಗಳಿಗೆ ನಿಮಗಿಲ್ಲಿ ದಕ್ಷಿಣೆ (ಸಂಬಳ) ನೀಡಲಾಗುತ್ತದೆ?'' ಎಂಬ ಅಸಂಬದ್ಧ ಪ್ರಶ್ನಾರೂಪದಿಂದ ಉತ್ತರಿಸಿದ ತಿಮ್ಮರಾಯ.

★★★

ಇಷ್ಟು ವರ್ಷಗಳೂ ಸಂಬಳಕ್ಕಿದ್ದವರಿಗೆ ಮಾತ್ರ ಶೋಷಣೆಯಾಗುತ್ತಿದ್ದರಿಂದ ದುಃಖಿತನಾಗಿದ್ದ ಪರಿತಾಪ ನೀರುಳ್ಳಿಯಪ್ಪನಿಗೆ, ಈ ಎಲ್ಲಾ ವಿದ್ಯಾಮಾನಗಳ ಅಧ್ಯಯನದಿಂದ, ಈಗ ಸಂಬಳಕ್ಕಿಟ್ಟುಕೊಂಡವರಿಗೂ ಸಂಕಟ ಶುರುವಾದದ್ದು ತಿಳಿದುಬಂದು, ತಾಪ ಆವಿಯಾಗಿ, ಪರಮಾನಂದವಾಯಿತು. ಅಂತೆಯೇ ದೇಶದಲ್ಲಿ ಕೆಲಸಗಳು ನಡೆಯಲೀ, ನಡೆಯದೇ ಇರಲಿ, ಅವೆಲ್ಲಾ ಮುಖ್ಯವಲ್ಲ; ಶೋಷಣೆಗಳ ರೀತಿ ಬದಲಾಗಿ, ಪರಿವರ್ತನೆಗಳುಂಟಾಗಿ ಕ್ರಾಂತಿಯಾಗುತ್ತಾ ಇರಬೇಕೆಂಬ ಅವನ ತೀವ್ರವಾದ ಭಾವನೆಗಳಿಗೀಗ ಶುಭಕಾಲ ಕೂಡಿ ಬಂದಿತ್ತು.

'ಧಣಿಯಿಂದ ಕೆಲಸದ ಆಳುಗಳ ಶೋಷಣೆ' ಎಂಬ ಘೋಷಣೆ ಹಳಸಲು ಮಾತಾಯ್ತು. 'ನೌಕರರಿಂದ ಯಜಮಾನರ ಶೋಷಣೆ', 'ಕಾರ್ಮಿಕರ ಕಾರ್ಯಹೀನ ವೈಖರಿಯಿಂದ ಕಂಪೆನಿಯ ಕಂಬನಿ' - ಇತ್ಯಾದಿ ನೂತನ ವಾಕ್ಯಗಳು ಭಾಷಣಗಳಲ್ಲಿ ಮೂಡಿ ಬಂದರೆ ಎಷ್ಟು ಕರ್ಣಾನಂದಕರ!

ಆಫೀಸುಗಳಲ್ಲಿ ಜಾಸ್ತಿ ಸಂಬಳ ತೆಗೆದುಕೊಳ್ಳುವ ಉದ್ಯೋಗಿಗಳು ಜಾಸ್ತಿ ದುಡಿಯಬೇಕು. ತಮ್ಮದು 'ತಲೆಯ ಕೆಲಸ' ಎಂದು ತರ್ಲೆ ಮಾಡಿ ಧಿಮಾಕು ತೋರಿಸುವವರಂತೂ ಖಂಡಿತವಾಗಿಯೂ ಇನ್ನು ಮುಂದೆ ದೊಡ್ಡ ದೊಡ್ಡ ಬೃಹತ್ ಗಾತ್ರದ ಲೆಕ್ಕಪುಸ್ತಕಗಳನ್ನು ತಾವೇ ಹೊತ್ತುಕೊಂಡು, ಆಚೀಚೆ ತಿರುಗಿ, ಮೈ ಕೆಲಸವನ್ನೂ ಮಾಡುತ್ತಾ ಮೈಗಳ್ಳತನವನ್ನು ದೂರೀಕರಿಸಬೇಕು.

ಅಲ್ಪ ಸಂಬಳಿಗಳು ದುಡಿಯಲೇ ಬೇಕೆಂಬ ನಿಯಮ ತಪ್ಪು! ಅವರು ಆಫೀಸು ಸಮಯದಲ್ಲಿ ಆರಾಮವಾಗಿ ಕಾಲ ಕಳೆಯಬೇಕು. ದೊಡ್ಡವರು - ಮೇಲಿನವರು ಎನ್ನಿಸಿಕೊಳ್ಳುವವರಿಂದ ಕೆಲಸ ಮಾಡಿಸಬೇಕು. ಆಗಲೇ ದೇಶದ, ವಿಶ್ವದ ಉದ್ಧಾರ ಸಾಧ್ಯ. ಇಂತಹ ಉಚ್ಚ ವಿಚಾರಧಾರೆಗಳನ್ನು ಬಲವಾಗಿ ನಂಬಿರುವ ಪರಿತಾಪ ಈರುಳ್ಳಿಯಪ್ಪನವರು ಇತ್ತೀಚಿನ ಸುಧಾರಣೆಗಳಿಂದ ಹರ್ಷಿತರಾಗಿ, ಇನ್ನಷ್ಟು ನೀರುಳ್ಳಿಯನ್ನು ಖರೀದಿಸಲು ಮಾರುಕಟ್ಟೆಯತ್ತ ದಾಪುಹೆಜ್ಜೆ ಹಾಕಿದರು.



ಎಲ್.ಓ.ಸಿ. ಅಂದ್ರೆ ಏನತ್ತೇ?

ಅಭಿಮಾನಪೂರ್ವಕವಾಗಿ....!

– ಟಿಬಿ. ಗೋಪಾಲಕೃಷ್ಣ

ನನ್ನ ಮೊದಲನೇ ಪುಸ್ತಕವನ್ನ ಒಂದು ಪ್ರಿಂಟಿಂಗ್ ಪ್ರೆಸ್ಸಿನಲ್ಲಿ ಅಚ್ಚು ಹಾಕಿಸುತ್ತಿದ್ದೆ. ಅಲ್ಲಿಗೆ ಅದೇನೇನೋ ಕೆಲಸಗಳ ಮೇಲೆ ಸಾಹಿತಿಗಳ ದಂಡು ದಂಡೇ ಪ್ರವೇಶಿಸುತ್ತಿತ್ತು. ಹೆಮ್ಮೆಯಿಂದ ಅವರಿಗೆ ನನ್ನ ಪರಿಚಯ ಹೇಳಿಕೊಂಡು ನನ್ನ ಪುಸ್ತಕದ ವಿವರ ನೀಡುತ್ತಿದ್ದೆ. ಸಾಹಿತಿಗಳು ನನ್ನ ಪ್ರವರ ಕೇಳಿ ನಕ್ಕು ನನಗೆ 'ಆಲ್ ದಿಬೆಸ್ಟ್' ಹೇಳುತ್ತಿದ್ದರು. 'ಬನ್ನಿ ಮನೆಗೆ' ಅಂತ ಆಹ್ವಾನ ನೀಡುತ್ತಿದ್ದರು. ಪ್ರೆಸ್ಸಿನಲ್ಲಿಯೇ ರಾತ್ರಿ ಎಂಟು ಒಂಬತ್ತರ ಸಮಯ ಆಗುತ್ತಿದ್ದುದರಿಂದ ಮತ್ತು ಪ್ರೆಸ್ಸಿನಿಂದ ನಾನಿರುವ ವಿದ್ಯಾರಣ್ಯಪುರಕ್ಕೆ ಮೂವತ್ಮೂರೂವರೆ ಕಿಲೋಮೀಟರು ದೂರವಿದ್ದರಿಂದ ಮತ್ತು ಈ ದೂರವನ್ನು ಬಿ.ಟಿ.ಎಸ್. ಬಸ್ಸುಗಳಲ್ಲೇ ಕ್ರಮಿಸಬೇಕಾದಂತಹ ಅನಿವಾರ್ಯತೆ ಇದ್ದುದರಿಂದ ಸುಮಾರು ಸಾಹಿತಿಗಳ ಮನೆಗೆ ಹೋಗಲೇ ಇಲ್ಲ. ಆದರೂ ಒಬ್ಬರು ಸಾಹಿತಿ ಮಿತ್ರರು ಒಂದು ಭಾನುವಾರ ಅವರ ಮನೆಗೆ ಬರಲೇಬೇಕು ಅಂತ ಒತ್ತಾಯ ಹೇರಿದರು ಮತ್ತು ಒಂದು ರೀತಿಯ ಆತ್ಮೀಯ ಬಲವಂತ ಸಹ ಮಾಡಿದರು. ಹೀಗಾಗಿ ಅವರ ಮನೆಗೆ ಒಂದು ಭಾನುವಾರ ಸಂಜೆ ನಾಲ್ಕಕ್ಕೆ ಸವಾರಿ ಮಾಡಿದೆ.

ತುಂಬ ಪ್ರೀತಿಯಿಂದ ಸ್ವಾಗತಿಸಿದರು. ಉಪ್ಪಿಟ್ಟು ಕಾಫಿ ನೀಡಿದರು. ಬಾಯಿ ತುಂಬಾ ಮಾತನಾಡಿದರು. 'ಹೊರಡ್ತೀನಿ ಸಾರ್' ಅಂತ ಮೇಲೆದ್ದಾಗ 'ಇರಿ ಇವರೇ' ಅಂತ ಅವರೂ ಎದ್ದರು. ಒಂದು ರೂಮಿನ ಷೀಟು ಹೊದಿಸಿದ ಸಣ್ಣ ಮನೆಯಲ್ಲಿ ಅವರು ಇದ್ದದ್ದು. ಗೋಡೆಗೆ ಒರಗಿಸಿದ್ದ ಆರು ಓಪನ್ ಷೆಲ್ಫುಗಳಲ್ಲೂ ಪುಸ್ತಕ ಸರಸ್ವತಿ ತುಂಬಿ ತುಳುಕುತ್ತಿದ್ದಳು. ರೂಮಿನ ಮಧ್ಯೆ ನಿಂತವರೇ ಚಕ್ ಚಕ್ ಅಂತ ಆರೂ ಸೆಲ್ಫುಗಳಲ್ಲಿ ಅಲ್ಲಲ್ಲಿ ಕೈ ಹಾಕಿದರು. ಹನ್ನೆರಡು ಸೆಕೆಂಡುಗಳಲ್ಲಿ ಹದಿನೆಂಟು ಪುಸ್ತಕಗಳು ಅವರ ಕೈ ಸೇರಿದ್ದವು. ಅವನ್ನ ಸಾಲಾಗಿ ಜೋಡಿಸಿ 'ತಗೊಳ್ಳಿ' ಅಂದರು 'ಸಾರ್ ಇದರ ಬೆಲೆ...' ಅಂತ ಜೇಬಿಗೆ ಕೈಹಾಕಲು ಹೋದೆ. ಮನೆಗೆ ಕರೆದು ಉಪ್ಪಿಟ್ಟು ಕಾಫಿ ಕೊಟ್ಟು ಈ ಪುಸ್ತಕ ನನಗೆ ಮಾರುವ ಯೋಜನೆ ಇವರ ತಲೇಲಿದೆ ಅಂದಿದ್ದರೆ ಇವರ ಮನೆಗೆ ಬರದೇ ತಪ್ಪಿಸಿಕೋಬಹುದಿತ್ತೇ ಅಂತ ನನ್ನ ಮಿದುಳು ಲೆಕ್ಕ ಹಾಕುತ್ತಿತ್ತು. 'ಛೇಛೇ ಬೇಡ ನಮ್ಮ ಭೇಟಿಯ ನೆನಪಿಗೆ' ಅಂತ ನಕ್ಕರು. ಸುಮಾರು ಎರಡು ಕೇಜಿಯಷ್ಟು ಭಾರವಿದ್ದ ಪುಸ್ತಕಗಳನ್ನು ಅವರಿಂದ ಪಡೆದೆ. 'ಬರ್ತೀನೀಮ್ಮಾ' ಅವರ ಮಡದಿಗೆ ಹೇಳುವಾಗ ಯಾಕೋ ಆಕೆಯ ಮುಖ ಸಂತಸದಿಂದ ಬೀಗಿದೆ ಅನ್ನಿಸಿತು. ಗಂಡನ

ಸ್ನೇಹಿತ ಅಂತ ಇರಬೇಕು ಅಂತಂದುಕೊಂಡು ಅವರ ಮನೆಯಿಂದ ಆಚೆಬಂದೆ. ಮೂಲೆ ಅಂಗಡಿಯಿಂದ ಒಂದು ಪಾಲಿತೀನ್ ಬ್ಯಾಗು ಕೊಂಡುಕೊಂಡು ಅದರಲ್ಲಿ ಇದನ್ನು ಸೇರಿಸಿ ಕೈಲಿ ಹಿಡಿದು ಮನೆ ಸೇರಿದೆ.

ಈ ರೀತಿ ಮೊದಲಬಾರಿಗೆ ಪುಕ್ಕಟೆ ಪುಸ್ತಕದ ಸಂಪಾದನೆ ನಾನು ಮಾಡಿದ್ದು, ಅಲ್ಲೀತನಕ ರಾಜ್ಯೋತ್ಸವ ಅಂತಲೋ, ಅಂಗಡಿ ಹೊಸದಾಗಿ ಆರಂಭ ಆಗ್ತಿದೆ ಅಂತಲೋ ಶೇ. ಹತ್ತರ ರಿಯಾಯಿತಿ ಅಂತ ಆಮಿಷ ತೋರಿಸುತ್ತಿದ್ದರು. ನೋಡಿ ಅಂತಹ ಕಡೆ ಪುಸ್ತಕ ಕೊಂಡು ಐವತ್ತು ರೂಪಾಯಿನ ಪುಸ್ತಕ ನಲವತ್ತೈದಕ್ಕೇ ಸಿಕ್ಕಿತು ಅಂತ ಖುಷಿ ಪಡುತ್ತಿದ್ದವನು ನಾನು. ಅದರ ಜತೆ ಜತೆಗೆ ಭಾನುವಾರ ಭಾನುವಾರಗಳಂದು ಬೆಂಗಳೂರಿನ ಕೆಂಪೇಗೌಡ ಸರ್ಕಲ್ಲಿನ ಸುತ್ತಮುತ್ತಲಿನ ಹಳೇ ಪುಸ್ತಕದ ಅಂಗಡಿಗಳು, ಫುಟ್‌ಪಾತ್ ಮೇಲೆ ಭಾನುವಾರಗಳಂದೇ ಜನ್ಮ ತಾಳಿ ಅಂದೇ ಸಾಯುವ ಅಂಗಡಿಗಳು ಇವುಗಳಿಂದ ಹಳೇ ಪುಸ್ತಕ ಕೊಂಡು ತರುತ್ತಿದ್ದವನು ನಾನು. ಪುಕ್ಕಟೆ ಪುಸ್ತಕಗಳು ಈ ಹಳೇ ಅಂಗಡಿಯಿಂದ ಕೊಂಡ ಪುಸ್ತಕಗಳಷ್ಟು ಮಜಾವನ್ನಾಗಲೀ, ಸಂತೋಷವನ್ನಾಗಲೀ ನೀಡುತ್ತಿಲ್ಲವಾದರೂ ಪುಕ್ಕಟೆ ಪುಸ್ತಕದ ಶೇಖರಣೆ ಅವ್ಯಾಹವಾಗಿ ಮುಂದುವರಿದೇ ಇತ್ತು.

ಸುಮಾರು ಜನ ನನಗಿಂತ ಹಳೆ ಸಾಹಿತಿಗಳು ಪ್ರೀತಿಯಿಂದ ನನ್ನನ್ನ ಮನೆಗೆ ಕರೀತಿದ್ದರು ಮತ್ತು ಈ ಪುಸ್ತಕಗಳ ಒಂದು ಗಂಟು ನೀಡುತ್ತಿದ್ದರು. ಬಾಗಿಲ ಸಂದಿಯಲ್ಲಿ ಅವರ ಮಡದಿ ಸಂತೋಷದ ಒಂದು ನೋಟ ಹರಿಸುತ್ತಿದ್ದರು. ಸಂತೋಷದ ನೋಟದ ಒಳ ಅರ್ಥ ನನಗೆ ತಿಳಿದೇ ಇರಲಿಲ್ಲ. ಅದರಿಂದಾಗಿ ಸಾಹಿತಿಗಳ ಮಡದಿಯರ ಮಟ್ಟದಲ್ಲಿನ ಈ ಸಂತೋಷ ನೋಡಬೇಕು ಅಂತಲೇ ಹಲವಾರು ಸಾಹಿತಿಗಳ ಮನೆಗಳಿಗೆ ಎರಡು ಮೂರು ನಾಲ್ಕು ಸಲ ಹೋಗಿದ್ದೇನೆ. ಕೆಲವು ಸಾರಿ ಒಬ್ಬೊಬ್ಬನೇ ಮತ್ತೆ ಕೆಲವು ಬಾರಿ ಗೆಳೆಯರ ಜತೆಗೂಡಿ ಸಹ. ಕೆಲವು ಸಾಹಿತಿಗಳ ಮನೆಗೆ ಮೊದಲನೇ ಸಲ ಒಬ್ಬಂಟಿಯಾಗಿ ಹೋಗಿ ಪುಸ್ತಕ ಪಡೆದು ಎರಡನೇ ಸಲವೂ ಒಬ್ಬಂಟಿಯಾಗಿ ಹೋಗಿ 'ಪುಸ್ತಕ ಆಗಲೇ ನೀಡಿದ್ದೀರಿ' ಅಂತ ಹೇಳಿದ್ದಿದೆ. ಅಂತಹ ಸಮಯದಲ್ಲಿ ಸಾಹಿತಿಗಳ ಅರ್ಧಾಂಗಿ ಬಾಗಿಲ ಸಂದಿಯಲ್ಲಿ ಕಾಣಿಸಿಲ್ಲದಿರುವುದೂ ನೆನಪಿನಲ್ಲಿದೆ. ಅದೇ ರೀತಿ ಗೆಳೆಯರ ಸಂಗಡ ಹೊದಾಗ ಸಾಹಿತಿಗಳು ಗೆಳೆಯರಿಗೆ ತಮ್ಮ ಪುಸ್ತಕದ ಗಂಟು ನೀಡಿ ನಾವು ಹೊರ ಹೊರಟ ಸಂದರ್ಭಗಳಲ್ಲಿ ಬಣ್ಣದ ಸೀರೆಯ ಅಂಚು ಬಾಗಿಲಲ್ಲಿ ಕಂಡಿದೆ. ಹೇಳಿಕೇಳಿ ನಾನು ಪತ್ತೇದಾರಿ ಕಾದಂಬರಿಕಾರನಲ್ಲವಾದ್ದರಿಂದ ಈ ಬಗ್ಗೆ ಅಷ್ಟೊಂದು ತಲೆ ಕೆಡಿಸಿಕೊಂಡಿಲ್ಲ.

ಈ ರೀತಿ ಪುಸ್ತಕದ ಗಂಟು ಪಡೆಯುವ ಕಾವ್ಯ ಹೇಗೆ ನನ್ನ ಜೀವನದಲ್ಲಿ ಹಾಸುಹೊಕ್ಕಾಗಿ ಬಿಟ್ಟಿತು ಅನ್ನುವುದಕ್ಕೆ ನಿಮಗೆ ಒಂದೆರಡು ಪ್ರಸಂಗ ಹೇಳಲೇಬೇಕು. ಯಾವುದೋ ಒಂದು ಅತಿ ಚಿಕ್ಕ ಕಾರ್ಯಕ್ರಮಕ್ಕೆ ಹೋಗಿದ್ದೆ. ಆರು ಜನ ಸಭಿಕರು, ನಾಲ್ಕು ಮಂದಿ ಭಾಷಣಕಾರರು ಇದ್ದ ಸಭೆ ಅದು. ಸಭಾಂಗಣದ ಹೊರಭಾಗದಲ್ಲಿ ಒಬ್ಬರು ನಾಲ್ಕು ಟೇಬಲು ಜೋಡಿಸಿ ಒಂದು ಇನ್ನೂರು ಪುಸ್ತಕಗಳನ್ನು 'ಫಾರ್ ಎಕ್ಸಿಬಿಷನ್ ಅಂಡ್ ಸೇಲ್'ಗಾಗಿ ಇರಿಸಿಕೊಂಡಿದ್ದರು. ಸಭೆ ಇನ್ನೂ ಆರಂಭ ಆಗಿರಲಿಲ್ಲ. ಯಾವ್ಯಾವ ಪುಸ್ತಕ ಇದೆ ನೋಡೋಣ ಅಂತ ಪುಸ್ತಕಗಳ ಹತ್ತಿರ ನಡೆದೆ. ಒಂದೊಂದೇ ಪುಸ್ತಕದ ಶೀರ್ಷಿಕೆ ನೋಡಿ, ಅದನ್ನು ಬರೆದವರು ಯಾರು ಅಂತ ನೋಡಿ ಅದರ ಬೆಲೆ ಏನೂಂತ ತಿಳ್ಕೊತಿದ್ದೆ. ಎರಡೂವರೆ ನಿಮಿಷ ಈ ರೀತಿ ನೋಡಿರಬಹುದು, ಒಬ್ಬರು ದುಢ ದುಢ ಅಂತ ಓಡಿಬಂದರು. ಪೋಸ್ಟ್ ಆಫೀಸುಗಳಲ್ಲಿ ಪೋಸ್ಟ್‌ಮ್ಯಾನ್‌ಗಳು ಅಂಚೆ ವಿಂಗಡಿಸೋದಿಲ್ಲವೇ ಅದೇ ರೀತಿ ಒಂದೊಂದು ಪುಸ್ತಕವನ್ನೂ ಜೋಡಿಸಿದರು. 'ತಗೊಳ್ಳಿ ಸಾರ್' ಅಂದರು!

'ಸಾರಿ ನಾನು ಕೊಂಡುಕೊಳ್ಳೋದಿಕ್ಕೆ ಬಂದಿಲ್ಲ...' ಅಂದೆ.

'ಪರವಾಗಿಲ್ಲ ತಗೊಳ್ಳಿ...' ಅಂದರು.

'ನನ್ನ ಹತ್ತಿರ ದುಡ್ಡಿಲ್ಲ ಕಣ್ರೀ....' ಅಂದೆ.

'ತಗೊಳ್ಳಿ ಪ್ಲೀಸ್...' ಅಂದರು.

ನನ್ನ ಹತ್ತಿರ ದುಡ್ಡಿಲ್ಲ ಅಂದರೂ ಈತ ಬಿಡ್ತಿಲ್ಲವಲ್ಲಾ ಅಂತ ಕೋಪ ಬಂತು. 'ಈ ಪುಸ್ತಕಗಳನ್ನ ನಾನು ಓದೊಲ್ಲಪ್ಪಾ....' ಅಂತ ಹೇಳಲು ಅಣಿಯಾಗುತ್ತಿದ್ದೆ.

'ಸಾರ್ ತಗೊಳ್ಳಿ ಸಾರ್ ದುಡ್ಡು ಬೇಡ ಹಾಗೇ ಕೊಡ್ತಿದೀವಿ, ನಮ್ಮ ಫಂಕ್ಷನ್‌ಗೆ ನೀವು ಬಂದಿದ್ದರ ಸವಿ ನೆನಪಿಗೆ ಅಂತ....' ಅಂತ ಹೇಳಿ ಒಂದು ಪುಸ್ತಕದ ಗಂಟನ್ನು ಕೈಗಿತ್ತರು. ಸರಿ ಅದನ್ನ ತೆಗೆದುಕೊಂಡೆ. ಬಿಟ್ಟಿ ಪುಸ್ತಕ ಸಿಕ್ಕಿದ ಮುಲಾಜಿಗೆ ಕಾರ್ಯಕ್ರಮದಲ್ಲಿ ಹೋಗಿ ಕೂತೆ. ಎರಡು ಭಾಷಣದ ನಡುವಿನ ಸಮಯದಲ್ಲಿ ಆಚೆ ಬಂದೆ. ನನಗೆ ಬೆನ್ನು ಮಾಡಿದ್ದವರೊಬ್ಬರು ಮತ್ತೊಬ್ಬರಿಗೆ ಹೇಳುತ್ತಿದ್ದರು. ''ಹನ್ನೆರಡು ಬಕರಾಗಳು ಸಿಕ್ಕಿದರು. ಈ ಕಸಾನ ಅವರ ತಲೇಗೆ ವರ್ಗಾಯಿಸಿದೀನಿ. ತಿರುಗಿ ಮತ್ತೆ ಗಂಟುಕಟ್ಟಿ ವಾಪಸ್ಸು ತಗೊಂಡು ಹೋಗಬೇಕು ಅಂತಿದ್ದರೆ ಆದಕ್ಕೆ ಕೂಲಿ, ಆಗೋ ಲಗೇಜು ಈ ಖರ್ಚೆಲ್ಲಾ ಮಿಗ್ತು ನೋಡಿ...''

ಇದೇ ತರಹ ಇಂದು ಸಮಾರಂಭಕ್ಕೆ ಹೋಗಿದ್ದೆ. ಅಲ್ಲಿ ಪುಸ್ತಕ ಇರಿಸಿಕೊಂಡು ಮಾರಲು ಕೂತಿದ್ದವರು ನನಗೆ ತಿಳಿದವರೇ. ನನ್ನನ್ನ ನೋಡಿದ ಕೂಡಲೇ ಆದರದಿಂದ ಎದ್ದು ನಿಂತರು 'ಚೆನ್ನಾಗಿದೀರಾ?' ಅಂತ ಕುಶಲ ವಿಚಾರಿಸಿದರು. 'ನಂದೇ ಪ್ರಕಟಣೆಗಳು...' ಅಂತ ಪುಸ್ತಕದ ರಾಶಿ ಕಡೆ ಕೈತೋರಿಸಿದರು. 'ತುಂಬಾ ಸಂತೋಷ ಹೆ..ಹ್ಹೆ...' ಅಂದೆ. ಭುವನೇಶ್ವರಿ ಸೇವೆ ಮಾಡುವವರಿಗೆ ನಾವು ಬೆನ್ನು ತಟ್ಟದೇ ಮತ್ಯಾರು ತಟ್ಟಬೇಕು? 'ಮಾರುಕ್ಕೆ ಅಂತಲ್ಲ ಸುಮ್ಮನೆ ಡಿಸ್‌ಪ್ಲೇ ಮಾಡ್ತಿದೀನಿ.....' ಅಂದರು. ಅವರ ಹತ್ತಿರ ಹತ್ತು ನಿಮಿಷ ಮಾತನಾಡಿ ಕಾರ್ಯಕ್ರಮಕ್ಕೆ ಕಾಲಿರಿಸಿದೆ. ಐದೇ ನಿಮಿಷದಲ್ಲಿ ಅವರು ನಮ್ಮ ಪಕ್ಕದಲ್ಲಿ, ಅವರ ಕೈನಲ್ಲಿ ಒಂದು ಹೊರೆ ಪುಸ್ತಕ! 'ಆಗಲೇ ಪುಸ್ತಕದ ದುಡ್ಡು ನಮಗೆ ಬಂದುಬಿಟ್ಟಿದೆ. ಇದನ್ನ ನಿಮ್ಮಂತಹವರು ಓದಲಿ ಅಂತ ಕೊಡ್ತಿದೀನಿ, ದಯವಿಟ್ಟು ಓದಿ ನಿಮ್ಮ ಅಭಿಪ್ರಾಯ ತಿಳಿಸಿ....' ಹಿಂದಿನ ಅನುಭವದಿಂದ ಅವರ ಹೊರೆ ಕಡಿಮೆ ಮಾಡ್ಕೊತಿದಾರೆ ಅಂಬೋ ಸತ್ಯ ಹೊಳೆದಿತ್ತು. ಆದರೆ ಪುಸ್ತಕಾನ ಹೇಗೆ ಬೇಡ ಅನ್ನೋದು? ಅದನ್ನ ನಾವು ಬೇಡ ಅಂದರೆ ಅದು ನಮ್ಮನ್ನ ಬೇಡ ಅಂತ ಅನ್ನುತ್ತೆ ಅಂತ ಅಜ್ಜಿ ನನಗೆ ನಾನು ಇಷ್ಟು ಎತ್ತರ ಇರಬೇಕಾದರೇನೇ ಪಾಠ ಹೇಳಿಟ್ಟಿದ್ದಾಳೆ! ಅದರಿಂದ ಮುಖದಲ್ಲಿ ಸಂತೋಷ ತೋರಿಸಿ ಅದನ್ನ ಸ್ವೀಕರಿಸಿದೆ. ಈ ತನಕ ಅದನ್ನ ಓದುವುದಿರಲಿ ತೆಗೆದೂ ಸಹ ನೋಡಿಲ್ಲ. ಆದರಿಂದ ಅಭಿಪ್ರಾಯ ಹೇಗೆ ತಿಳಿಸಲಿ. ಅದರಲ್ಲೂ ಪುಸ್ತಕ ನೀಡಿದವರು ನಿಜವಾಗಲೂ ನನ್ನ ಅಭಿಪ್ರಾಯಕ್ಕಾಗಿ ಪುಸ್ತಕ ನೀಡಿದ್ದಾರೆಯೇ ಎಂಬ ಸಂಶಯ ನನ್ನದು.

ಸಾಹಿತ್ಯದ ಅಭಿರುಚಿ ಅಂಬೋದು ಮನೆಯಲ್ಲಿರುವವರಿಗೆ ಅದರಲ್ಲೂ ನಿಮ್ಮ ಅರ್ಧಾಂಗಿಗೆ ನಿಮ್ಮಷ್ಟೇ ಇದ್ದರೆ ನೀವು ಬಚಾವು. ಇಲ್ಲವಾದಲ್ಲಿ ಮೊದಮೊದಲು ಈ ಪುಸ್ತಕದ ಗಂಟುಗಳು ನಿಮ್ಮ ಮನೆಯನ್ನು ನಿಮ್ಮ ಸಂಗಡ ಪ್ರವೇಶಿಸಿದಾಗ ಖುಷಿ ಪಡುತ್ತಿದ್ದ ನಿಮ್ಮಾಕೆ ನಂತರ ಅದರ ಬಗ್ಗೆ ಸಿಡಿಗುಟ್ಟಲಾರಂಭಿಸುತ್ತಾರೆ. ''ಊರಿನಲ್ಲಿರೋ ಕಸ ಎಲ್ಲಾ ಇಲ್ಲಿ ತಂದು ಸೇರಿಸಲು ಇದೇನು ಕಸದ ತೊಟ್ಟಿಯೋ ಕಾರ್ಪೊರೇಷನ್ ಕಛೇರಿಯೋ'' ಎಂದು ಹಾರಾಡಲಾರಂಭಿಸುತ್ತಾಳೆ. ನಂತರ ರೋಸಿ ಹೋಗಿ ನಿಮಗೆ ಯಾವುದೇ ಸಭೆ ಸಮಾರಂಭಗಳಿಗೆ ಹೋಗದಿರುವಂತೆ ಕಟ್ಟೆಚ್ಚರ ವಿಧಿಸುತ್ತಾಳೆ. ಈ ಕಟ್ಟೆಚ್ಚರವೂ ಫಲ ನೀಡದಿದ್ದಾಗ ಏನಾಗುತ್ತದೆ?

ಕಟ್ಟೆಚ್ಚರವೂ ಫಲ ನೀಡದಿದ್ದಾಗ ಎಂತಹ ಅನಾಹುತವಾಗುವುದು ಎಂಬುದರ ಅರಿವು ಮೊನ್ನೆ ನನಗಾಯಿತು. ಹಿರಿಯರೊಬ್ಬರ ಮನೆಗೆ ಹೋಗಿದ್ದೆ. ಅವರೂ ಸಾಹಿತಿಗಳು ಎಂದು ಹೇಳುವುದು ಬೇಡ. 'ಕೈ ಕತ್ತರಿಸಿ ಹಾಕ್ತೀನಿ' ಎಂಬ

ಕೋಪದ ಮಾತು ಸಾಹಿತಿಗಳು ಒಳಗೆ ಬಟ್ಟೆ ಧರಿಸಲು ಹೋದಾಗ ನನಗೆ ಕೇಳಿಸಿತು. ಈ ಕೋಪದ ಮಾತು ಅವರಾಕೆಯದು ಎಂದು ತಿಳಿದಿತ್ತು. ಹಿರಿಯರ ಸಂಗಡ ಯಥಾ ಪ್ರಕಾರ ಒಂದು ಸಾಹಿತ್ಯದ ಸಮಾರಂಭಕ್ಕೆ ಹೋದೆ. ಎಂದಿನಂತೆ ಎರಡು ಪುಸ್ತಕದ ಹೊರೆಗಳು, ನನಗೆ, ಹಿರಿಯ ಸಾಹಿತಿಗಳಿಗೆ ಸಿದ್ಧ ಆಯಿತು.

ಸಾಹಿತಿಗಳು ಪುಸ್ತಕದ ಗಂಟು ನೀಡುವವರನ್ನು ದೂರದಲ್ಲೇ ನಿಲ್ಲಿಸಿದರು. 'ನಿಮ್ಮ ವಿಶ್ವಾಸ ನನ್ನ ಮೇಲಿದೆಯೋ?...' ಅಂತ ಕೇಳಿದರು. ಎರಡೂ ಕೈಜೋಡಿಸಿ ಮುಗಿದಿದ್ದರು.

ಪುಸ್ತಕದ ಗಂಟು ಹೊತ್ತವರು 'ಹೂಂ ಸಾರ್ ಇದೆ' ಅಂದರು. ನನ್ನನ್ನ ಕಂಡರೆ ನಿಮಗೆ ಪ್ರೀತಿ ಇದೆ ತಾನೇ?...'

'ಇದೆ ಸಾರ್' ಎಂಬ ಉತ್ತರ ಬಂತು.

ನಾನು ಇನ್ನೂ ಹತ್ತಾರು ವರ್ಷ ಬರೀಬೇಕು ಅಂತ ತಾವು ನಿಜವಾಗಲೂ ಅಂದ್ಕೊಂಡಿದ್ದೀರಿ ತಾನೇ?....'

ಇದಕ್ಕೂ 'ಹೌದು' ಅಂದೇ ಉತ್ತರ ಬಂತು.

'ಹಾಗಿದ್ದರೆ ಒಂದು ಕೆಲಸ ಮಾಡಿ. ದಯವಿಟ್ಟು ಈ ಪುಸ್ತಕದ ಹೊರೇನ ಯಾರಿಗಾದರೂ ಬೇರೆಯವರಿಗೆ - ನಿಮಗೆ ಯಾರ ಮೇಲೆ ದ್ವೇಷ ಇದೆಯೋ, ಪ್ರೀತಿ ಇಲ್ಲವೋ, ಈ ಮನುಷ್ಯನ ಕಾಟ ಸಾಕು ಅಂತ ಅನಿಸಿದೆಯೋ ಅವರಿಗೆ ಕೊಡಿ'.... ಎಂದರು!

ಪುಸ್ತಕದ ಗಂಟು ನೀಡಲು ಬಂದವರು ಅಪ್ರತಿಭರಾದರೂ ಅದನ್ನ ತೋರಿಸಿಕೊಳ್ಳಲಿಲ್ಲ. 'ಸರಿಸಾರ್' ಅಂದರು. ಆದರೆ ಅವರಿಗೆ ಅಂತ ತಂದಿದ್ದ ಗಂಟನ್ನೂ ನನಗೇ ನೀಡಿದರು!

ಅದರ ನಂತರ ಇನ್ನು ಮುಂದೆ ಈ ಪುಸ್ತಕಗಳನ್ನು ನೀಡುವಂತಹ ಸಮಾರಂಭಗಳಿಗೆ ಹೋಗಬಾರದು ಅಂತ 'ಭೀಷ್ಮ ಪ್ರತಿಜ್ಞೆ' ಮಾಡಿದ್ದೇನೆ! 'ಅಭಿಮಾನ ಪೂರ್ವಕವಾಗಿ' ಅಂತ ಯಾರೋ ಪುಸ್ತಕದ ಗಂಟು ನೀಡಿದರೂ ತಗೋಬಾರದು ಅಂತ ತೀರ್ಮಾನಿಸಿದ್ದೇನೆ!!

ಕನ್ಯಾಕುಮಾರಿಯ ಕತೆ

- ವಿಕ್ರಮ ಕವಲಿ

'ಎಲ್ಲರ ಮನೆಯ ದೋಸೆ ತೂತೇ' ಎನ್ನುವ ವಾಕ್ಯವನ್ನು ಎಲ್ಲರೂ ಕೇಳಿರುತ್ತಾರೆ. ಅದೇನು ಮಹಾ ಎಲ್ಲರಿಗೂ ಗೊತ್ತಿದ್ದ ವಿಷಯವೇ. ಅದನ್ನು ಹೇಳುವುದಕ್ಕೆ ಮಹಾ ಬುದ್ಧಿಶಾಲಿಯೇ ಆಗಬೇಕೆಂಬುದಿಲ್ಲವಲ್ಲ ಎಂದು ಅಭಿಪ್ರಾಯ ಪಡುವವರೇ ಎಲ್ಲರೂ. ಆದರೆ ಇದನ್ನು ಹೇಳಿದವನು ನಿಜವಾಗಿಯೂ ಮಹಾ ಅನುಭವಶಾಲಿಯಾಗಿರಬೇಕೆಂದು ಖಚಿತವಾದ ಅಭಿಪ್ರಾಯ ತಳೆದ ದಂಪತಿಗಳು ಎಂದರೆ ನಮ್ಮ ಸುರೇಶ ಮತ್ತು ಅವನ ಪತ್ನಿ ಸುಮನಾ.

ಮದುವೆಯಾಗಿ ಬಹಳ ವರುಷಗಳಾಗಿಲ್ಲ. ವರುಷ ವರುಷವೂ ಮಾಡುತ್ತಿದ್ದ ಮಂಗಳಗೌರಿ ಪೂಜೆಗೆ ಇನ್ನೂ ಮಂಗಳ ಹಾಡಿಲ್ಲ. ಸುರೇಶ ಯಾವಾಗಲೂ ಹಾಸ್ಯದ ಹೊನಲನ್ನೇ ಹರಿಸಿಕೊಂಡೇ ಇರುವವ; ಸುಮಳದು ಹಾಸ್ಯವನ್ನು ಸವಿಯುವ ಸ್ವಭಾವವಾಗಿದೆಯಾದರೂ ಸಂಕೋಚವೂ ಸ್ವಲ್ಪ ಅಧಿಕವೇ. ಅದು ಅಷ್ಟೊಂದು ಸರಿಯಲ್ಲ, ಆ ರೀತಿಯ ಕಾಂಪ್ಲೆಕ್ಸ್‌ನಿಂದ ಹೊರಬಂದರೆ ಒಳ್ಳೆಯದೆಂದು ಆರಂಭದಲ್ಲಿ ತಿಳುವಳಿಕೆ ನೀಡಲು ಪ್ರಯತ್ನಪಟ್ಟು, ಬಹಳ ಬೇಗನೆ ಸ್ವಭಾವೋ ಮರತಿಕ್ರಮಃ ಎಂದು ಅಲ್ಲಿಗೇ ಅದನ್ನು ಕೈಬಿಟ್ಟಿದ್ದ.

ಹಾಗೆಂದು ಆ ಸ್ವಭಾವದಿಂದ ಕಹಿ ಅನುಭವವೇನೂ ಆಗಿರಲಿಲ್ಲ. ಬದಲು ಸಿಹಿ ಅನುಭವವೆಂದೇ ಹೇಳಬಹುದಾದ ಅನುಭವ.

ಈ ಕತೆಯಲ್ಲಿ 'ದೋಸೆಯ ತೂತಿ'ನ ಪಾತ್ರವೆಲ್ಲಿಂದ ಬಂದಿತು ಎನ್ನುವ ಪ್ರಶ್ನೆಗೆ ಉತ್ತರವೂ, 'ಸಿಹಿ ಅನುಭವ'ಕ್ಕೆ ಕಾರಣಕರ್ತೃವೂ ಆದ ಮೈಸೂರುಪಾಕಿನ ಉಲ್ಲೇಖ ಅಗತ್ಯ. 'ಮೈಸೂರು ಪಾಕು' ಎನ್ನುವಾಗ 'ಸ್ಪೆಶಲ್' ಪ್ರಕಾರದ್ದನ್ನು ಕೈಬಿಟ್ಟುಬಿಡಿ. ತೂಕ, ಫಿಗರು, ಡಯೆಟ್ ಗಳಿಗೆ ವಿಶೇಷ ಪ್ರಾಮುಖ್ಯವಿರುವ ಇಂದಿನ ದಿವಸಗಳಲ್ಲಿ ಅದು ನಮ್ಮ ಲಿಸ್ಟಿನಿಂದ ಹೊರಗೇ. ದೋಸೆ ಮತ್ತು ಮೈಸೂರು ಪಾಕುಗಳಲ್ಲಿ ಬಹು ಮುಖ್ಯ ಸಾಮ್ಯವೇನೆಂದರೆ ದೋಸೆಯಲ್ಲಿಯೂ ತೂತು, ಮೈಸೂರುಪಾಕಿನಲ್ಲಿಯೂ ತೂತು. ಗಾದೆ ಹೇಳುವವರು 'ಎಲ್ಲರ ಮನೆಯ ದೋಸೆ ತೂತೇ' ಎಂದು ಹೇಳಿದರೇ ಹೊರತು 'ಎಲ್ಲರ ಮನೆಯ ಮೈಸೂರು ಪಾಕೂ ತೂತೇ' ಎಂದು ಹೇಳದೆ ಇರುವುದನ್ನು ಗಮನಿಸಿದ್ದೀರಾ?

ಹಾಗೆ ಹೇಳದೇ ಇರಲು ಅವರ ಅನುಭವದಲ್ಲಿ ಆ ರೀತಿ ಘಟನೆಗಳು ನಡೆದಿರಬೇಕೆಂದು ಸುರೇಶನ ಬಲವಾದ ನಂಬಿಕೆ.

ಮಾಡುವ ಕ್ರಮದಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಸಾಕು ತೂತುಗಳು ಅಥವಾ ಕಣ್ಣುಗಳು ಅವತರಿಸದೇ, ಮಾಡುವವರಿಗೆ 'ಕೈ ಸುಟ್ಟುಕೊಂಡ' ಅನುಭವ!

ಇವರ ಮನೆಯಲ್ಲಿ ಇವರ ಅಕ್ಕ ಒಂದು ಸಲ ಮೈಸೂರುಪಾಕು ಮಾಡಿದ್ದಾಗ ಭಾಗಶಃ ಯಶಸ್ಸು ದೊರಕಿ ಅದರ ಮೇಲ್ಭಾಗದಲ್ಲಿ ಮಾತ್ರ ಕಣ್ಣು ಕಾಣಿಸಿಕೊಂಡಿದ್ದವು.

'ಓಹೋ, ಇದು ಶ್ರೀಮಂತರ ಜಾತಿಯ ಮೈಸೂರುಪಾಕು, ನೆತ್ತಿಯ ಮೇಲೆ ಕಣ್ಣು ಅಲ್ಲವೇ!' ಎಂದು ಗೇಲಿ ಮಾಡಿದ್ದ.

ಇದು ಮದುವೆಗಿಂತ ಎಷ್ಟೋ ಮುಂಚೆ ನಡೆದದ್ದಾದರೂ ತನ್ನ ಅತ್ತಿಗೆಯ ಹತ್ತಿರ ಅಣ್ಣನ ಕೀಟಲೆಯ ಸ್ವಭಾವದ ವರದಿ ಮಾಡುವಾಗ ಇದರ ಉಲ್ಲೇಖ ಬಂದು ಹೋಗಿತ್ತು.

ಇಬ್ಬರೇ ಇರುತ್ತಿದ್ದ ಮನೆಯಲ್ಲಿ ಸಾಕಷ್ಟು ವಿರಾಮವಷ್ಟೇ. ಸುರೇಶ ಆಫೀಸಿನಿಂದ ಬರುವ ಮುಂಚೆಯೇ ಮೈಸೂರುಪಾಕು ಮಾಡಿ 'ಭಲೆ' ಎನ್ನಿಸಿಕೊಳ್ಳುವ ತವಕ ಸುಮನಳಿಗೆ. ಆದರೆ ಪ್ರತಿಸಲವೂ ಏನಾದರೂ ಎಡವಟ್ಟು ಆಗಿಯೇ ಆಗುತ್ತಿತ್ತು. 'ಕಣ್ಣು ಮೂಡದ' ಮೈಸೂರುಪಾಕು ಇವಳನ್ನು ಕಂಡು 'ಕಣ್ಣು ಮಿಟುಕಿಸಿ' ಅಣಕಿಸಿದಂತಾಗುತ್ತಿತ್ತು. ಛಿದ್ರೇಷ್ವನರ್ಥಾ ಬಹುಲೀ ಭವಂತಿ ಎಂದು ಬಲ್ಲವರು ಹೇಳಿರುವಾಗ ಇಲ್ಲಿ ಛಿದ್ರಗಳಿಲ್ಲದೇ ಅನರ್ಥವಾಗಿರುತ್ತಿತ್ತು. ಗಂಡ ಮನೆಗೆ ಬಂದಾ ಅದೇ ಸಿಹಿ ತಿಂಡಿಗೆ, 'ತ್ರಿಮೂರ್ತಿ', 'ಬೇಸನ್ ಬಹಾರ್' ಎಂದು ಏನಾದರೂ 'ಹೊಸ ರುಚಿ'ಯಲ್ಲಿ ಬಂದ ಹೆಸರು ಕೊಟ್ಟು, ಅದೇ ತಿಂಡಿಯನ್ನು ಕೊಡುತ್ತಿದ್ದಳು. ಅವನಿಗೇನು! ಬೆಲ್ಲ, ಸಕ್ಕರೆ ಹಾಕಿದ ಯಾವ ತಿಂಡಿ ಕೊಟ್ಟರೂ ಖುಶಿಯಿಂದ ತಿನ್ನುವ ಜಾಯಮಾನದವನು. ಚೆನ್ನಾಗಿದೆ ಎನ್ನುತ್ತ ಪ್ಲೇಟು ಖಾಲಿ ಮಾಡುತ್ತಿದ್ದ. ಇಬ್ಬರೂ ಮುಗುಳುನಗುತ್ತ ಕುಳಿತದ್ದನ್ನು ನೋಡಿದಾಗ ನೆರೆ ರಾಜ್ಯದ ಮುಖ್ಯಮಂತ್ರಿಗಳು ಅಂತರ್‍ರಾಜ್ಯ ಸಮಸ್ಯೆಯ ಬಗೆಗೆ ಮಾತನಾಡಲು ಕುಳಿತಂತಿರುತ್ತಿತ್ತು. ಒಬ್ಬರ ಗುಟ್ಟು ಇನ್ನೊಬ್ಬರಿಗೆ ತಿಳಿದಿದೆ, ಆದರೆ ಬಾಯಿಯಿಂದ ಹೇಳುವ ಮಾತುಗಳಲ್ಲಿ ಅದರ ಉಲ್ಲೇಖವಿರುವುದಿಲ್ಲ. ಆದರೂ ಒಳಗಿದ್ದದ್ದು ಹೊರಗೆ ಬಿದ್ದು ಹೋದರೆ ಸಮಾಧಾನವಾಗುವುದೆಂಬ ಅನಿಸಿಕೆ ಇಬ್ಬರಿಗೂ. ಬಾಯಿಬಿಟ್ಟು ಹೇಳಲು ಸಂಕೋಚ.

ಶ್ರಾವಣದಲ್ಲಿ ಒಂದೆರಡು ದಿನ ಶಾಲೆಗೆ ರಜೆ ಒಟ್ಟಿಗೆ ಬಂದದ್ದರಿಂದ ಮಂಗಳಗೌರಿಯ ಹಬ್ಬಕ್ಕೆಂದು ಸುಮನಳ ಚಿಕ್ಕ ತಂಗಿಯರು ಇಬ್ಬರು ಬಂದಿದ್ದರು. ಪೂಜೆಯ ವೇಳೆಗೆ ಅಗತ್ಯವಿದ್ದ ಸುಮಂಗಲಿಯರ ಸಂಖ್ಯೆಯನ್ನು ಐದಕ್ಕೆ ಸರಿತೂಗಿಸಲು ಇಬ್ಬರು ತಂಗಿಯರನ್ನೇ ಸೇರಿಸಿಕೊಳ್ಳಲಾಗಿತ್ತು.

'ಅಕ್ಕ ನಮಗೆ ಇಂದು ಅರಿಸಿನ ಕುಂಕುಮ ಹಚ್ಚಿ ನಮಸ್ಕಾರ ಮಾಡಿದಳು. ನಾವು ಕನ್ಯಾಕುಮಾರಿ ರೂಪವಂತೆ' ಎಂದು ತಂಗಿಯರು ಸಂತೋಷದಿಂದ ಹೇಳಿದಾಗ

'ಹಾಗಾದರೆ ನಿಮಗೂ ಬಾಣಾಸುರ ಗಂಟುಬೀಳುತ್ತಾನೆ' ಎಂದು ಸುರೇಶ ಛೇಡಿಸಲು ನೋಡಿದಾಗ

'ನಾವು ಬಾಣಾಸುರನನ್ನು ನಾಶಮಾಡಿ ಶಿವನನ್ನು ವರಿಸುತ್ತೇವೆ'

'ಓ, ನಿಮ್ಮ ಇಂಗ್ಲಿಷ್ ಮೀಡಿಯಂ ಶಾಲೆಯಲ್ಲಿ ಇಂತಹ ಕತೆಗಳನ್ನೂ ಕೇಳಿಸುತ್ತಾರೆ!'

'ಓಹೋ, ಚೆನ್ನಾಗಿ ಹೇಳುತ್ತಾರೆ. ಬಾಣಾಸುರನಿಗೆ ಚಿರಂಜೀವಿಯಾಗುವ ವರ ಕೊಡಲು ಸಾಧ್ಯವಿಲ್ಲ next best ಕೇಳು ಎಂದಾಗ ಮದುವೆಯಾಗದ ಕನ್ಯೆಯ ಕೈಯಲ್ಲಿ ಮಾತ್ರ ಸಾವು ಎಂದು ವರ ಸಿಕ್ಕಿತು'.

'ಖಡ್ಗ ಬಾಣಗಳಿಂದಲೂ ಸಾವಿಲ್ಲ ಎಂದು ಬೇರೆ ಕೇಳಿಕೊಂಡಿದ್ದ'.

'ಪಾರ್ವತಿ ಒಂದು ಅವತಾರದಲ್ಲಿ ಇನ್ನೂ ಮದುವೆಯಾಗುವದಕ್ಕೆ ಮುಂಚೆಯೇ ಇವನನ್ನು ಕೊಲ್ಲಬೇಕೆಂದು ಬ್ರಹ್ಮಸಂಕಲ್ಪವಿರುತ್ತದೆ.'

'ಮದುವೆಯ ಪ್ರಸ್ತಾಪ ತಂದ ಶಿವನಿಗೆ ಐದು ಅಪರೂಪದ ವಸ್ತುಗಳನ್ನು ತರಲು ಪಾರ್ವತಿ ಹೇಳುತ್ತಾಳೆ'

'ಎಸಳು ಇಲ್ಲದ ಹೂವು, ನರಗಳಿಲ್ಲದ ಎಲೆ, ಗಿಣ್ಣು ಇಲ್ಲದ ಕಬ್ಬು... ಇನ್ನೆರಡು'

'ತಡೆ ನಾನು ಹೇಳುತ್ತೇನೆ, ಕಣ್ಣು ಇಲ್ಲದ ತೆಂಗಿನಕಾಯಿ, ಎಸಳು ಇಲ್ಲದ ಹೂವು...'

ಅಕ್ಕ ತಂಗಿಯರಿಬ್ಬರೂ ತಡವರಿಸುತ್ತಿದ್ದಾಗ ಸುರೇಶನೇ ಮಾತು ಮುಂದುವರಿಸಿದ, 'ಗೊರಟವಿಲ್ಲದ ಮಾವಿನ ಹಣ್ಣು.... ನೋಡಿ ಸ್ವಲ್ಪವೇ ವಿಷಯಗಳನ್ನು ನೆನಪಿಟ್ಟುಕೊಳ್ಳಬೇಕಾಗಿರುವ ನಿಮಗೆ ಈ ಐದು ವಸ್ತುಗಳು ಸರಿಯಾಗಿ ನೆನಪುಳಿಯಲಿಲ್ಲ, ಇನ್ನು ಸಮಸ್ತ ಪ್ರಪಂಚದ ವ್ಯವಹಾರ

ನೋಡಿಕೊಳ್ಳಬೇಕಾದ ಶಿವನ ಕಷ್ಟವೆಷ್ಟಿರಬೇಡ! ನಾಲ್ಕು ವಸ್ತುಗಳನ್ನೇನೋ ಸಂಗ್ರಹಿಸಿದನಂತೆ. ಐದನೆಯದು ಯಾವದೆಂದು ನೆನಪಿಗೆ ಬರಲೊಲ್ಲದು. ತಲೆಕೆರೆದುಕೊಂಡು ಯೋಜನೆ ಮಾಡಬೇಕೆಂದರೆ ಮದುವೆಯ ಸಲುವಾಗಿ ಮಾಡಿಕೊಂಡ ಹೇರ್ ಸ್ಟೈಲ್ ಕೆಟ್ಟೀತೆಂಬ ಮುಜುಗರ. ಅದು ಹೇಗೋ ಅವನ ಕಲ್ಪನೆಯಲ್ಲಿ ತೂತುಗಳಿಲ್ಲದ ಮೈಸೂರುಪಾಕು ಆಗಿರಬೇಕೆಂದು ಅನಿಸಿತು. ಎಲ್ಲ ವಸ್ತುಗಳನ್ನು ಒಟ್ಟುಮಾಡಿಕೊಂಡು ಪಾರ್ವತಿಯ ಹತ್ತಿರ ಬಂದ....'

'ಮತ್ತೆ ಕೋಳಿಯಾಗಿ ಕೂಗಬೇಕಾದ ನಾರದ?...'

'ಈ ಕತೆಯಲ್ಲಿ ಅವನಿಗೆ ಸರಿಯಾದ ಸಮಯಕ್ಕೆ ಎಚ್ಚರವಾಗಲಿಲ್ಲವಂತೆ' ಎಂದು ಸುರೇಶ ಹೇಳಿದಾಗ

'ಅವನಲ್ಲಿ ಅಲಾರ್ಮು ಹೊಡೆಯದ ಗಡಿಯಾರ ಎಂಬ ಆರನೆಯ ವಸ್ತು ಇತ್ತು...' ಎಂದು ಇನ್ನೊಬ್ಬಳು ಸರಿಪಡಿಸಿದಳು.

'ಪಾರ್ವತಿ ಶಿವ ತಂದ ವಸ್ತುಗಳನ್ನೆಲ್ಲ ಒಂದೊಂದಾಗಿ ಪರೀಕ್ಷಿಸಿದಳು. ನಾಲ್ಕು ಸರಿಯಾದವುಗಳು. ಐದನೆಯದು! ಛೆ, ಇದನ್ನೇನು ತಂದಿರುವೆ? ಎಂದಾಗ ಇದು ತೂತಿಲ್ಲದ ಮೈಸೂರುಪಾಕು, ಏಕೀಕರಣದ ಪರಿಣಾಮದಿಂದ ಇನ್ನಷ್ಟು ಬಲಗೊಂಡಿರುವ ಮೈಸೂರಿನ ಮೈಸೂರುಪಾಕು ಎಂದು ಶಿವ ಹೇಳಿದಾಗ ಅದೇನು ಪಾರ್ವತಿಯಮೇಲೆ ಪರಿಣಾಮ ಬೀರಲಿಲ್ಲ. ಇದು ನಾನು ಹೇಳಿದ ವಸ್ತುವಲ್ಲ ಎನ್ನುತ್ತ ದೂರಕ್ಕೆ ಬಿಸಾಡಿದಳು. ಅದೇ ಸಮಯಕ್ಕೆ ಆ ದಾರಿಯಲ್ಲಿ ಬರುತ್ತಿದ್ದ ಬಾಣಾಸುರನ ಹಣೆಗೆ ಅದು ಬಡಿಯಿತು. ಮೃತ್ಯು ದೇವತೆಗೆ ಅಷ್ಟೇ ಸಾಕಾಯಿತು. ಕನ್ಯಾಕುಮಾರಿಯೊಬ್ಬಳ ಕೈಯಿಂದ ಎಸೆಯಲ್ಪಟ್ಟ, ಖಡ್ಗ ಬಾಣ ಮೊದಲಾದ ಅಸ್ತ್ರಗಳ ಸಾಲಿಗೆ ಸೇರದ ಅಸ್ತ್ರ ಬಾಣಾಸುರಣ ಹಣೆಗೆ ಬಡಿದಿದೆ. ಬ್ರಹ್ಮಸಂಕಲ್ಪದ ಪ್ರಕಾರ ಇದೇ ಸರಿಯಾದ ಅವಕಾಶ ಎಂದು ತನ್ನ ಕೆಲಸ ಮುಗಿಸಿಯೇ ಬಿಟ್ಟಳು.'

1956 ರಲ್ಲಿ ಏಕೀಕರಣವಾಗಿ ಮೈಸೂರು ಎಂದು ಉದಯವಾದ ಕತೆ ಸುಮನಳ ತಂಗಿಯರಿಗೆ ಗೊತ್ತಿಲ್ಲ, ಹಳೆಯ ಕತೆ. ಆದರೆ 'ಏಕೀಕರಣ', 'ಬಲಗೊಂಡದ್ದು', ಮುಂತಾದ ಶಬ್ದಗಳ ಅರ್ಥ ಸುಮನಳಿಗೆ ಮಾತ್ರ ಸರಿಯಾಗಿ ಅರ್ಥವಾಗಿ, ಪರಸ್ಪರ ಗುಟ್ಟನ್ನು ಅರಿತಿದ್ದು ಹೇಳಲಾಗದೆ ಮುಜಗರಪಟ್ಟಿದ್ದ ಪರಿಸ್ಥಿತಿ ಇಂದು ಮುಕ್ತಾಯಗೊಂಡಿದ್ದಕ್ಕೆ ಸಂತೋಷವಾಯಿತು. ಹಾಸ್ಯರಸದ ಹೊಸಲಿನಲ್ಲಿಯೇ ಎಲ್ಲವನ್ನೂ ನಿಭಾಯಿಸಿದ ಸುರೇಶನ ಬಗೆಗೆ ಗೌರವವೂ ಹೆಚ್ಚಿತು.

ಸಣ್ಣಕಥೆ ಮತ್ತು ಹಾಸ್ಯ

- ಕೃಷ್ಣ ಸುಬ್ಬರಾವ್

ಅಪರಂಜಿ (ಜುಲೈ 2001)ಯಲ್ಲಿ ವೈವಿಧ್ಯತೆಯ ಬಗ್ಗೆ ಕಾಳಜಿ ವಹಿಸಿ ಸಂಪಾದಕ ಶಿವು ಅವರು 'ನಮ್ಮನಮ್ಮಲ್ಲಿ' ವಿಭಾಗದಲ್ಲಿ ಸಣ್ಣಕಥೆಗಳ ಬಗ್ಗೆ ಓದುಗರಿಗೆ ಹಾಗೂ ಲೇಖಕರಿಗೆ ಸ್ಪಂದಿಸಲು ಮನವಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ನನಗೆ ವೈ.ಎನ್.ಕೆ. ಅವರ ಮಾತುಗಳು ಮತ್ತೆ ಮತ್ತೆ ನೆನಪಿಗೆ ಬರುತ್ತದೆ. ಅವರು ಯಾವಾಗಲೂ ಹಾಸ್ಯದ ಪ್ರತ್ಯೇಕತೆ ಬಗ್ಗೆ ಆಕ್ಷೇಪಿಸುತ್ತಿದ್ದರು. ಅಂದರೆ ಅವರ ಅಭಿಪ್ರಾಯದಲ್ಲಿ ಹಾಸ್ಯದ ಹರಿವು ಮುಖ್ಯವಾಹಿನಿಯಲ್ಲೇ ಬರಬೇಕು. ಹಾಸ್ಯ ಲೇಖನವೆಂದು ವಿಶೇಷ ಪಟ್ಟಿಕೊಟ್ಟು ಅದಕ್ಕಾಗಿ ಕಷ್ಟಪಟ್ಟು ಒದ್ದಾಡುವುದನ್ನು ವಿರೋಧಿಸುತ್ತಿದ್ದರು. ವಿಪರ್ಯಾಸವೆಂದರೆ ಅವರೇ 'ಪ್ರಜಾವಾಣಿ' ಹಾಗೂ 'ಕನ್ನಡಪ್ರಭ'ದಲ್ಲಿ ಹಾಸ್ಯಕ್ಕಾಗಿಯೇ ಕಾಲಂಗಳನ್ನು ಸೃಷ್ಟಿಸಿದರು. ಆಡುವ ಮಾತಿನಲ್ಲಿ, ಬರವಣಿಗೆಯ ಎಲ್ಲಾ ರೂಪದಲ್ಲೂ ಹಾಸ್ಯ ಸಹಜವಾಗಿ, ಸರಳವಾಗಿ ಬರಬೇಕೆಂಬುದು ಅವರ ಆಸೆಯಾಗಿತ್ತು. ಕೈಲಾಸಂ, ನಾಟಕದ ಸಂಭಾಷಣೆಯಲ್ಲಿ ಹಾಸ್ಯದ ಹೊಳೆ ಹರಿಸಿದರೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ 'ಶ್ರೀನಿವಾಸ' ಎಂಬ ಹೆಸರಿನಲ್ಲಿ ಸಣ್ಣಕಥೆಗಳಲ್ಲಿ ಹಾಸ್ಯ ಸೃಷ್ಟಿಸಿದರು. ಕೆ.ಎಸ್. ನರಸಿಂಹಸ್ವಾಮಿ ತಮ್ಮ 'ರಾಯರು ಬಂದು ಮಾವನ ಮನೆಗೆ' ಹಾಡಿನಲ್ಲಿ ಹಾಸ್ಯ ತುಂಬಿದರು. ಇದೆಲ್ಲಾ ಈಗಿನ ಲೇಖಕರಿಗೆ ಮಾದರಿಯಾಗಲಿ ಎಂಬುದೇ ಬಹುಶಃ ಶಿವಕುಮಾರ್ ಅವರ ಆಸೆ, ನಿರೀಕ್ಷೆ ಎಂದೆನಿಸುತ್ತದೆ ನನಗೆ. ಸಣ್ಣಕಥೆಯ ಪಿತಾಮಹಾ ಎನ್ನಬಹುದಾದ ಮಾಸ್ತಿಯವರ 'ರಂಗನ ಮದುವೆ', 'ರಂಗಪ್ಪನ ದೀಪಾವಳಿ' 'ರಂಗಪ್ಪನ ಕೋರ್ಟ್‌ಕೇಸ್' ಹಾಗೂ 'ವೆಂಕಟರಾಯನ ಪಿಶಾಚ' ಅದ್ಭುತ ಹಾಸ್ಯವನ್ನು ಕೊಟ್ಟ ಸಣ್ಣಕಥೆಗಳು. ಇದರ ಜೊತೆಗೆ 'ರಂಗಸ್ವಾಮಿಯ ಅವಿವೇಕ', 'ನಮ್ಮ ಮೇಷ್ಟ್ರು', 'ಇಂದಿರೆಯೋ? ಅಲ್ಲವೋ?' - ಕೂಡ ಸ್ವಾರಸ್ಯಕರವಾದ ಘಟನೆಗಳನ್ನು ಒಳಗೊಂಡಿರುವಂತದ್ದು.

'ನಮ್ಮ ಮೇಷ್ಟರು' ಎಂಬ ಒಂದು ವ್ಯಕ್ತಿ ಚಿತ್ರಣ (profile) ಕಥೆಯಲ್ಲಿ ಹಾಸ್ಯವನ್ನು ಗಾಂಭೀರ್ಯದೊಡನೆ ಮಾಸ್ತಿ ಸಲೀಸಾಗಿ ಬೆರಸುತ್ತಾರೆ. ಜೀವನದ ಗಂಭೀರ ಮುಖಕ್ಕೆ ಕನ್ನಡಿಯಾಗುವ ಹಾಸ್ಯ, ನೋವಿನ ಅಸ್ತಿಭಾರದ ಮೇಲೆ ನಿಂತ ಹಾಸ್ಯ ಅತ್ಯುತ್ತಮವಾದ ಹಾಸ್ಯವಾಗುತ್ತೆ. ಅದಕ್ಕೆ ಕಾರಣ ತುಟಿಗೆ ನಗುವನ್ನು

ತರುವಾಗಲೇ ಮೆದುಳಿಗೆ ಕೆಲಸವನ್ನು ಕೊಡುವ ಕಾರ್ಯ. ಹೃದಯಕ್ಕೆ ಶಿಕ್ಷಣವನ್ನು ನೀಡುತ್ತದೆ. ಶಾಲೆಯಲ್ಲಿ ಇನ್‌ಸ್ಪೆಕ್ಟರ್ ಬಂದಾಗ ಮೇಷ್ಟ್ರ ಹೆಂಡ್ತಿ ಗಡಿಬಿಡಿಯಲ್ಲಿ ವಿದ್ಯಾರ್ಥಿನಿಯರ ನಡುವೆ ಕುಳಿತುಕೊಳ್ಳುವುದು, ಆಗ ಅವರು "ಈ ಬಲಿತ ಹುಡುಗಿ ಯಾರು?" ಎಂದಾಗ ಹೆಂಡ್ತಿ ಕೋಪದಿಂದ "ಬಲಿತ ಹುಡುಗಿಯಂತೆ, ಬಲಿತ ಹುಡುಗಿ, ಯಾರೋ ಎಳೆಯ ನಿಂಬೆಯ ಕಾಯಿ" ಎನ್ನುತ್ತಾ ಇನ್‌ಸ್ಪೆಕ್ಟರನ್ನು ಬೈಯುತ್ತಾ ಎದ್ದು ಹೋಗುವ ದೃಶ್ಯ ರಂಜನೀಯವಾದದ್ದು, ಓದುಗರನ್ನು ಸೆಳೆಯುವ ದೃಶ್ಯಗಳು.

ಹೀಗೆ ರಂಗಣ್ಣನ Trio - (ಮೂರು ಕಥೆಗಳನ್ನು) ಶಾಮಣ್ಣನ ಮೂಲಕ 'ಶ್ರೀನಿವಾಸರು" ಹೇಳಿಸುತ್ತಾರೆ. ಶಾಮಣ್ಣ ವಿನೋದಪ್ರಿಯರು. ಕಥೆ ಹೇಳುವವರು ಕಥೆಯ ಒಂದು ಪಾತ್ರವಾಗೂ ಬಿಡುವುದು ವಿಶೇಷ. ಹೊಸದಾಗಿ ಮದುವೆಯಾದ ರಂಗಣ್ಣ ತನ್ನ ಹೆಂಡತಿಯಿಂದ ದೀರ್ಘವಾದ ಕಾಗದಕ್ಕಾಗಿ ಪರದಾಡುವುದು. ಕ್ಷೇಮ ಸಮಾಚಾರವೇ ಕಾಗದವನ್ನೆಲ್ಲಾ ತಿಂದುಬಿಡುವುದು. ಕಡೆಗೆ "ಎಲ್ಲರೂ ಒಟ್ಟಾಗಿ ಕ್ಷೇಮವಾಗಿರುವುದನ್ನು ಬಿಟ್ಟು ಒಬ್ಬೊಬ್ಬರೇ ಕ್ಷೇಮವಾಗಿರಲು ಪ್ರಾರಂಭ ಮಾಡಿದರು" ಎಂದು ಹೆಂಡ್ತಿಯ ಅರಸಿಕತೆ ಬಗ್ಗೆ ಮಾತನಾಡುವ ಸೊಗಸು ಮಾಸ್ತಿಯವರ ಕಥೆಗಳಲ್ಲಿ ಉದ್ಭವವಾಗುತ್ತದೆ. ಹಾಗೆ 'ರಾಯರು ಬಂದರು ಮಾವನ ಮನೆಗೆ' ಅಳಿಯನ ಪರಿಹಾಸವನ್ನು ಬಣ್ಣಿಸುವ ತಿಳಿಹಾಸ್ಯ ಕೆ.ಎಸ್.ನ. ರಲ್ಲಿ ಕಾಣಬೇಕು. ಮೇಲ್ಕಂಡ ಕಥೆಗಳಲ್ಲಿ, ಹಾಡಿನಲ್ಲಿ ಹಳೆಯ ಕಾಲದ ಸಂಪ್ರದಾಯಗಳಿದ್ದರೂ ಈಗಲೂ ಓದಿದಾಗ, ಆ ಹಿನ್ನಲೆಯನ್ನು ಕಲ್ಪಿಸಿಕೊಂಡಾಗ ಮತ್ತೆ ಮತ್ತೆ ನಗುತ್ತೇವೆ. ಇದಕ್ಕೆ ಮುಖ್ಯ ಕಾರಣ ನಿರೂಪಣೆಯ ಶೈಲಿ.

ಪೂರ್ಣಚಂದ್ರ ತೇಜಸ್ವಿಯವರ "ಅಬಚೂರಿನ ಪೋಸ್ಟ್ ಆಫೀಸ್"ನ ಪೋಸ್ಟ್ ಮಾಸ್ಟರ ದಿನಚರಿಯಲ್ಲಿ ಬರುವ ಹಾಸ್ಯ ಸನ್ನಿವೇಶಗಳನ್ನು ಮರೆಯಲು ಸಾಧ್ಯವೇ? ತೇಜಸ್ವಿಯವರ ಕಥೆಗಳಲ್ಲಿ ಹಾಸ್ಯವಿದ್ದೇ ಇರುತ್ತದೆ. ಹಾಗೆ ನಮಗೆ ಸ್ವಾರಸ್ಯವಾದ ಕಥಾಹಂದರದೊಡನೆ ಹಿತಮಿತವಾಗಿ ಹಾಸ್ಯ ಬೆರೆಸುವ ಸಣ್ಣಕಥೆಗಳನ್ನು ನಮಗೆ 'ಆನಂದ' ಸದಾಶಿವ ಕೊಟ್ಟಿದ್ದಾರೆ.

ಹಾಸ್ಯ ಒಂದು ದ್ರವ್ಯ. ಯಾವ ಗಡಿಗೆಗಾದರೂ ತುಂಬಿಕೊಳ್ಳುವಂತ ವಸ್ತು. ಯಾವ ಚೌಕಟ್ಟಾದರೇನು, ಅದು ತನ್ನತನವನ್ನು ವಿಜೃಂಭಿಸುತ್ತದೆ. ಒಳಗಿನ ಹೂರಣ ಮುಖ್ಯ. ಬಾಹ್ಯರೂಪ ಯಾವುದಾದರೇನು? ಈ ನಿಟ್ಟಿನಲ್ಲಿ ಅಪರಂಜಿಯ ಬಳಗದ ಲೇಖಕರಲ್ಲಿ ಹೊಸ ಚಾಲನೆ ಸಿಗಲಿ ಎಂದು ಹಾರೈಸುತ್ತಾ ವಿರಮಿಸುತ್ತೇನೆ.

ಪ್ರತಿಕ್ರಿಯೆ

ಮಾನ್ಯ ಸಂಪಾದಕರಲ್ಲಿ,

ಕಮಲಾ ರಾಮಸ್ವಾಮಿ.

ಸಣ್ಣ ಕಥೆ ಎಂದರೇನು, ಆದರ ಗುಣ ಲಕ್ಷಣಗಳೇನು ಎಂಬ ಪ್ರಶ್ನೆಗೆ ನನ್ನ ಉತ್ತರ ಇದು.

ಸಣ್ಣ ಕಥೆ, ಹೆಸರೇ ಹೇಳುವಂತೆ ಚಿಕ್ಕದಾಗಿ, ಚೊಕ್ಕವಾಗಿ, ಕಥಾಂಶವನ್ನು ಸಂಕ್ಷಿಪ್ತವಾಗಿ, ಸರಳವಾಗಿ, ಕಲಾತ್ಮಕವಾಗಿ ನಿರೂಪಿಸುವ ಬರಹ. ಈ ಸಣ್ಣಕಥೆಗಳಲ್ಲೂ ನಾನಾ ಬಗೆ, ಮಕ್ಕಳ ಕಥೆಗಳು, ನೀತಿಯ ಕಥೆಗಳು ಇತ್ಯಾದಿ. ಈ ಕಥೆಗಳಲ್ಲಿ ಕಥೆಯ ಉದ್ದೇಶವನ್ನು ಮಾತ್ರ ತಿಳಿಸುವುದೆ ಅದರ ಗುರಿ.

ಸಾಮಾನ್ಯವಾಗಿ ಒಂದು ಸಣ್ಣಕಥೆ ಮೂರು ಪುಟದ್ದಾಗಿರಬಹುದು, ಹತ್ತು ಪುಟದ್ದಾಗಿರಬಹುದು. ಇಲ್ಲಿ ಮುಖ್ಯವಾದ ಅಂಶವೆಂದರೆ ಒಂದು ಸಣ್ಣ ಘಟನೆಯ ಸುತ್ತ ಹೆಣೆದ ಕಥೆಯಲ್ಲಿ ಕಂಡು ಬರುವ ಬದುಕಿನ ತಿಕ್ಕಾಟ, ಧರ್ಮಸೂಕ್ಷ್ಮತೆ, ಸಮಾಜದ ಕುಂದುಕೊರತೆಗಳು, ಮೌಲ್ಯಗಳು, ಸಂದೇಹಗಳು ಎಲ್ಲವನ್ನೂ ಅಳವಡಿಸಿಕೊಂಡು ಕಥೆ ಎನ್ನಿಸಿಕೊಳ್ಳುತ್ತದೆ. ಸಣ್ಣಕಥೆ ಒಂದು ಕಾದಂಬರಿಯ ಬುನಾದಿಯಾಗಬಲ್ಲದು. ಕಾದಂಬರಿಯಲ್ಲಿ ಕೆಲವೇ ವ್ಯಕ್ತಿಗಳ ವ್ಯಕ್ತಿತ್ವವನ್ನು ವಿವರವಾಗಿ ಪರಿಚಯಿಸಿದರೆ, ಸಣ್ಣಕಥೆ ಈ ಕೆಲಸವನ್ನು ಕೆಲವೇ ಪುಟಗಳಲ್ಲಿ ಮಾಡಿಬಿಡುತ್ತದೆ.

ಸಣ್ಣಕಥೆಗಳಲ್ಲಿ ಶೈಲಿ, ನಿರೂಪಣೆ ಎಷ್ಟು ಮುಖ್ಯವೋ, ಕಥಾವಸ್ತು ಮತ್ತು ನಿರೂಪಿಸಲು ಬಳಸುವ ತಂತ್ರ ಅಷ್ಟೇ ಮುಖ್ಯ. ಉದಾಹರಣೆಗೆ, ಒಂದು ಛಾಯಾಚಿತ್ರ ಸ್ಪರ್ಧೆಗೆ ವಸ್ತು ಒಂದೇ ಇದ್ದರೂ, ಅತ್ಯುತ್ತಮ ಎನ್ನಿಸಿಕೊಳ್ಳುವ ಚಿತ್ರಕ್ಕೆ ಹೇಗೆ ಚಿತ್ರಕಾರನ ಅಂದಚಂದದ ಪರಿಜ್ಞಾನ, ನೋಡುವ ದೃಷ್ಟಿಕೋನ, ಕಲಾತ್ಮಕ ಮನೋಭಾವ ಎಲ್ಲಾ ಮುಖ್ಯ ಅಂಶಗಳೋ, ಹಾಗೆಯೇ ಸಣ್ಣಕಥೆಗಳಲ್ಲೂ ಶೈಲಿ, ಕಥಾವಸ್ತು, ನಿರೂಪಣೆ ಮತ್ತು ಉದ್ದೇಶ ಮುಖ್ಯ.

। ಎಮ್ಮ ಮನೆಯಂಗಳದಿ । ಒಂದು ಭಾವ-ನಾತ್ಮಕ ಕ್ಷಣದ ವಿವರ. ನಿತ್ಯಜೀವನದಲ್ಲಿ ಮಿಂಚಿ ಹೋಗುವ ಒಂದು ಕ್ಷಣದ ಚಿತ್ರಣ ಎನಿಸಿಕೊಳ್ಳುತ್ತದೆ. ಇದೊಂದು ಲಲಿತ ಪ್ರಬಂಧ ಎಂದರೆ ತಪ್ಪಾಗಲಾರದು.

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003.
PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010.
Editor : M. SHIVAKUMAR